# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


Sampreethi - Samruddhi | Volume : 7 | Issue : 3 | July 2024 | Pages : 32 | ₹ 20/-

ಸಂಪ್ರೀತಿ ಸಮೃದ್ಧಿ | ಸಂಪುಟ : 7 | ಸಂಚಿಕೆ : 3 | ಜುಲೈ 2024 | ಪುಟಗಳು : 32 | ₹ 20 ರೂ.






|| JAI SRI GURUDEV ||

SRI ADICHUNCHANAGIRI SHIKSHANA TRUST(R)

# Adichunchanagiri Institute of Technology

AFFILIATED TO VISVESVARAYA TECHNOLOGICAL UNIVERSITY, BELAGAVI
APPROVED BY AICTE NEW DELHI AND RECOGNIZED BY GOVT. OF KARNATAKA.
ACCREDITED BY NAAC WITH "A" GRADE (CYCLE - II)
CHIKKAMAGALURU



ACCREDITED WITH GRADE A NAAC

www.aitckm.edu.in

# ADMISSIONS OPEN

Academic Year : 2024-25

Since 1980

## COURSES OFFERED

### B.E.COURSES

1. ARTIFICIAL INTELLIGENCE AND MACHINE LEARNING
2. CIVIL ENGINEERING
3. COMPUTER SCIENCE AND ENGINEERING
4. COMPUTER SCIENCE AND ENGINEERING (DATA SCIENCE)
5. ELECTRONICS AND COMMUNICATION ENGINEERING
6. ELECTRICAL AND ELECTRONICS ENGINEERING
7. INFORMATION SCIENCE AND ENGINEERING
8. MECHANICAL ENGINEERING
9. ROBOTICS AND ARTIFICIAL INTELLIGENCE New

### MASTER DEGREE COURSES

**M.Tech**

1. STRUCTURAL ENGINEERING **(Civil. Engg.)**
2. COMPUTER SCIENCE AND ENGINEERING **(CS & Engineering)**
3. DIGITAL ELECTRONICS AND COMMUNICATION SYSTEM **(E & C Engg.,)**

**MBA** (Master of Business Administration)

**B.E. COURSES**
CET CODE - E064, COMEDK CODE - E004

**M.Tech**
CET CODE - T803

**MBA**
CET CODE - B109

## SILENT FEATURES:

- VTU Ist Rank with Gold Medal - 2022-23
- Transportation Facility
- "A" Grade Accredited by NAAC
- Encouragement is given to merit students in the form of the Cash Awards & Gold Medals
- Over 200 University Ranks
- High Ambience with Blessed Nature
- Committed & Supportive Management
- Close to 100% Results Every Year
- Separate Hostel Facility for boys & girls
- Sprawling Campus of 60 acres
- State of the art Infrastructure & Laboratories
- Well Experienced and Qualified Faculty
- Placement Training & 100% Placement Assistance
- Curricular, Co-Curricular & Extra Curricular Activities
- Collaboration with Reputed Industries & Educational Institutes

## TRAINING AND PLACEMENTS

**40+ Campus Placement Drive**

**530+ Job Offers**

**Minimum Package 3.5 LPA**

**Highest Package 11.79 LPA**

## OUR TOP RECRUITERS

Clarivate Analytics, tcs, Cognizant, Rakuten, TEKsystems, HITACHI, wipro, HEXAWARE, IBM, Infosys, Capgemini

**For Admissions Contact:**

Dr. C.T. Jayadeva (Principal): 9448665711, Dr. C.K. Subbaraya (Director): 9448480343, Mr.N.S. Sagar(Registrar):9141133697/08262 220444

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


## ಸಂಪಾದಕೀಯ


**ಜುಲೈ : 2024**

**ಸಂಪುಟ 7, ಸಂಚಿಕೆ 3**

ಸಂಪಾದಕರು

ಡಾ॥ ಸಿ. ನಂಜುಂಡಯ್ಯ

ಚಂದಾ ವಿವರ :

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.



ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**



ಮುದ್ರಕರು

- **ಕಂಪ್ಯೂಟರ್ ವರ್ಲ್ಡ್**
  ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
  ಮಲ್ಲಿಗೆ ತೋಟ, ಮಾಗಡಿ ರಸ್ತೆ,
  ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.



sampreethisamruddhi@gmail.com

8971608213



ಸಂಪ್ರೀತಿ - ಸಮೃದ್ಧಿ



ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳ ಆಡಳಿತ ಪರಿಷತ್ ಶಿಫಾರಸ್ಸಿನಂತೆ 1989ರಿಂದ ಜುಲೈ 11ರಂದು ವಿಶ್ವ ಜನಸಂಖ್ಯಾ ದಿನವನ್ನಾಗಿ ಆಚರಿಸಲಾಗುತ್ತಿದೆ. 1987ರಲ್ಲಿ ಜಾಗತಿಕ ಜನಸಂಖ್ಯೆಯು ಐದು ಬಿಲಿಯನ್ ತಲುಪಿದಾಗ ವಿಶ್ವಬ್ಯಾಂಕ್‌ನ ಹಿರಿಯ ಜನಸಂಖ್ಯಾ ತಜ್ಞ ಡಾ॥ ಕೆ.ಸಿ.ಝುಕಾರಿಯಾ ಅವರ ಸಲಹೆಯ ಮೇರೆಗೆ ಈ ದಿನವನ್ನು ಆಚರಿಸಲು ಪ್ರಾರಂಭಿಸಲಾಯಿತು. ಆ ಬಳಿಕ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 1990ರಲ್ಲಿ ಈ ದಿನವನ್ನು ಅಧಿಕೃತಗೊಳಿಸಿತು. ಜನಸಂಖ್ಯೆಯ ಕುರಿತಾದ ವಿವಿಧ ಸಮಸ್ಯೆಗಳ ಬಗ್ಗೆ ಜಾಗತಿಕ ಸಮುದಾಯದ ಗಮನ ಸೆಳೆಯುವುದು ಈ ಆಚರಣೆಯ ಪ್ರಮುಖ ಉದ್ದೇಶ.

ಜಾಗತಿಕ ಜನಸಂಖ್ಯೆಯು ಪ್ರಸ್ತುತ 804 ಕೋಟಿಯನ್ನು ದಾಟಿದ್ದು ನಿಯಂತ್ರಣವು ಬಹಳ ದೊಡ್ಡ ಸವಾಲಾಗಿ ವಿಶ್ವದ ಮುಂದೆ ನಿಂತಿದೆ. ಜಾಗತಿಕ ಜನಸಂಖ್ಯೆಯ ಸೂಚ್ಯಂಕದಲ್ಲಿ ತೀರಾ ಇತ್ತೀಚೆಗಿನವರೆಗೆ ಚೀನ ದೇಶವು ಜಗತ್ತಿನ ಅಗ್ರಸ್ಥಾನಿಯಾಗಿತ್ತು. ಆದರೆ ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯುಎನ್‌ಪಿಎಫ್‌ಎ) 2023ರ ಏಪ್ರಿಲ್‌ನಲ್ಲಿ ಘೋಷಣೆ ಮಾಡಿರುವಂತೆ ಜನಸಂಖ್ಯೆಯಲ್ಲಿ ಭಾರತ, ಚೀನವನ್ನು ಹಿಂದಿಕ್ಕಿ "ವಿಶ್ವ ಚಾಂಪಿಯನ್" ಆಗಿದೆ. ಇದು ಸಂಭ್ರಮಿಸುವ ವಿಚಾರವೇ? ಖಂಡಿತಾ ಅಲ್ಲ. ನಮ್ಮ ದೇಶದ ಮುಂದಿರುವ ಅತ್ಯಂತ ಗಂಭೀರ ವಾದ ಸಮಸ್ಯೆಯಿದು. 193ಕ್ಕಿಂತಲೂ ಹೆಚ್ಚು ರಾಷ್ಟ್ರಗಳನ್ನು ಹೊಂದಿರುವ ಜಾಗತಿಕ ಸಮುದಾಯದಲ್ಲಿ ಭಾರತದ ಜನಸಂಖ್ಯೆಯ ಪಾಲು ಶೇ.17.7

1959ರಲ್ಲಿ ಕೇವಲ 3 ಬಿಲಿಯನ್ ಇದ್ದ ವಿಶ್ವದ ಜನಸಂಖ್ಯೆ 40 ವರ್ಷಗಳಲ್ಲಿ (1999) 6 ಬಿಲಿಯನ್‌ಗೆ ಏರಿಕೆಯಾಯಿತು. ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ 2058ರಲ್ಲಿ ಜಾಗತಿಕ ಜನಸಂಖ್ಯೆ 10 ಬಿಲಿಯನ್ ತಲುಪಬಹುದೆಂದು ಊಹಿಸಲಾಗಿದೆ. 2023 ಮತ್ತು 2050ರ ನಡುವಿನ ಅವಧಿಯಲ್ಲಿ ಅತ್ಯಧಿಕ ಜನಸಂಖ್ಯಾ ಬೆಳವಣಿಗೆ ಆಫ್ರಿಕಾ ಖಂಡದಲ್ಲಿ ಕಾಣಲಿದ್ದು ಯುರೋಪ್‌ನಲ್ಲಿ ಇಳಿಕೆಯಾಗಲಿದೆ. ದೇಶದ ಜನಸಂಖ್ಯಾ ಶಾಸ್ತ್ರದ ಕಡೆಗೆ ಕಣ್ಣು ಹಾಯಿಸಿದಾಗ ನಮ್ಮಲ್ಲಿ ಪ್ರತೀ ಚದರ ಕಿ.ಮೀ.ಗೆ 473.42ರಷ್ಟು ಜನ ಸಾಂದ್ರತೆಯಿದೆ. 2023ರ ಅಂದಾಜಿನಂತೆ ಭಾರತೀಯರ ಸರಾಸರಿ ಜೀವಿತಾವಧಿ ಸರಿಸುಮಾರು 72 ವರ್ಷಗಳಾಗಿವೆ. 2022ರ ಅಂದಾಜಿನಂತೆ ನಮ್ಮ ದೇಶದ ಜನಸಂಖ್ಯಾ ಬೆಳವಣಿಗೆ ದರ ಶೇ. 0.68. ವಯಸ್ಸಿನ ರಚನೆಯನ್ನು ಗಮನಿಸಿದರೆ 2021ರ ಅಂದಾಜಿನಂತೆ ಶೇ. 25.68 ಜನಸಂಖ್ಯೆಯು 0–14 ವರ್ಷದ ಒಳಗಿನವರಾಗಿದ್ದು ಶೇ. 67.49 ಜನ ಸಂಖ್ಯೆಯು 15–64 ವರ್ಷದ ಒಳಗಿನವರು ಹಾಗೂ ಶೇ. 6.63ರಷ್ಟು ಜನಸಂಖ್ಯೆ 65ಕ್ಕಿಂತಲೂ ಹೆಚ್ಚು ವಯಸ್ಸಿನವರು. ॐ

# ಚೆಸ್





ಅಂತರರಾಷ್ಟ್ರೀಯ ಚೆಸ್ ದಿನ (International Chess Day). ಇದು ಪ್ರತಿ ವರ್ಷ ಜುಲೈ 20ರಂದು ನಡೆಯುವ ವಾರ್ಷಿಕ ಆಚರಣೆ. ಪ್ಯಾರಿಸ್‌ನಲ್ಲಿ 1924ರ ಇದೇ ದಿನ ಇಂಟರ್‌ನ್ಯಾಷನಲ್ ಚೆಸ್ ಫೆಡರೇಷನ್ (FIDE) ಸ್ಥಾಪನೆಯಾಗಿತ್ತು. ಈ ದಿನವನ್ನು ಅಂತರರಾಷ್ಟ್ರೀಯ ಚೆಸ್ ದಿನವನ್ನಾಗಿ ಆಚರಿಸುವ ಪ್ರಸ್ತಾವನೆಯನ್ನು ಯುನೆಸ್ಕೋ ಮುಂದಿಟ್ಟಿತ್ತು. ಚೆಸ್ ಫೆಡರೇಷನ್ ಸ್ಥಾಪನೆಯಾದ ಬಳಿಕ 1966 ರಿಂದೀಚೆಗೆ ಪ್ರತಿ ವರ್ಷ ಈ ಆಚರಣೆ ನಡೆಯುತ್ತ ಬಂದಿದೆ. ಈ ಫೆಡರೇಷನ್ ಈಗ 199 ಸದಸ್ಯ ರಾಷ್ಟ್ರಗಳ ಫೆಡರೇಷನ್ ಆಗಿ ಬೆಳೆದಿದೆ. ಇದು ಬುದ್ಧಿವಂತರ ಆಟ ಎಂದು ಕರೆಸಿಕೊಳ್ಳುವ ಚದುರಂಗದಾಟ ಮಹಾಭಾರತ ಕಾಲದಿಂದಲೂ ಖ್ಯಾತಿ ಪಡೆದಿದೆ.

ಮಹಾಭಾರತ ಕಾಲದಿಂದಲೂ ಚಾಲ್ತಿಯಲ್ಲಿರುವ ಚದುರಂಗದಾಟ ಬಹುತೇಕರಿಗೆ ಅಚ್ಚುಮೆಚ್ಚು. ಚೆಸ್ ಆಟವು ಪ್ರಪಂಚದಾದ್ಯಂತ ಅತೀ ಹೆಚ್ಚು ಜನರು ಮೆಚ್ಚುವ ಬೋರ್ಡ್ ಗೇಮ್. ಈ ಚದುರಂಗದಾಟವನ್ನು ಜೀವನಕ್ಕೂ ಹೋಲಿಸುತ್ತಾರೆ.

ಚದುರಂಗದಾಟ ಎಂದರೆ ನೆನಪಿಗೆ ಬರುವುದು ವಿಶ್ವನಾಥನ್ ಆನಂದ್. ಇವರು ಚೆಸ್ ಆಟದ ಮೂಲಕ ಪ್ರಪಂಚದಾದ್ಯಂತ ಖ್ಯಾತಿ ಗಳಿಸಿದವರು. ಚೆಸ್ ಆಟವನ್ನು ಬುದ್ಧಿವಂತ ಆಟ ಎಂದೂ ಕರೆಯುತ್ತಾರೆ. ಇದು ಬುದ್ಧಿಮತ್ತೆ ಬಳಸಿ ಆಡುವ ಆಟವಾಗಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹಳ ವೈಭವದಿಂದ ಚೆಸ್ ದಿನವನ್ನು ಆಚರಿಸಲಾಗುತ್ತದೆ.

**ಚೆಸ್ ದಿನಾಚರಣೆ ಆರಂಭ**

ಇಂಟರ್‌ನ್ಯಾಷನಲ್ ಚೆಸ್ ಫೆಡರೇಶನ್ ಸ್ಥಾಪನೆಯ ನೆನಪಿಗಾಗಿ ಯುನೆಸ್ಕೊ 1996ರಲ್ಲಿ ಅಂತರರಾಷ್ಟ್ರೀಯ ಚೆಸ್ ದಿನವನ್ನು ಘೋಷಿಸಿತು. ಇದನ್ನು ಸಾಮಾನ್ಯವಾಗಿ ಎಫ್‌ಐಡಿಇ (FIDE)ಎಂದೂ ಕರೆಯಲಾಗುತ್ತದೆ.

ಎಂದೂ ಕರೆಯಲಾಗುತ್ತದೆ.

ಎಫ್‌ಐಡಿಇ ಅನ್ನು ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಸ್ಥಾಪಿಸಲಾಯಿತು. ಪ್ರಸ್ತುತ ಸ್ವಿಟ್ಜರ್ಲೆಂಡ್‌ನಲ್ಲಿ ಇದರ ಪ್ರಧಾನ ಕಚೇರಿ ಇದೆ. ಎಫ್‌ಐಡಿಇ ವಿವಿಧ ಅಂತರರಾಷ್ಟ್ರೀಯ ಚೆಸ್ ಫೆಡರೇಶನ್‌ಗಳನ್ನು ಸಂಪರ್ಕಿಸುವ ಜವಾಬ್ದಾರಿಯುತ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ ಮತ್ತು ಅಂತರರಾಷ್ಟ್ರೀಯ ಚೆಸ್ ಸ್ಪರ್ಧೆಗಳಿಗೆ ಆಡಳಿತ ಮಂಡಳಿಯಾಗಿಯೂ ಕೂಡ ಕಾರ್ಯ ನಿರ್ವಹಿಸುತ್ತದೆ. ಎಫ್‌ಐಡಿಇ ಅನ್ನು 1999ರಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು ಗುರುತಿಸಿತು.

ಚೆಸ್ ಆಟವನ್ನು ಪ್ರಪಂಚದಾದ್ಯಂತ ಬಹುತೇಕರು ಮೆಚ್ಚುತ್ತಾರೆ ಹಾಗೂ ಪ್ರೀತಿಸುತ್ತಾರೆ. ಅಂತರರಾಷ್ಟ್ರೀಯ ಚೆಸ್ ದಿನವನ್ನು ಆಚರಿಸಲು ಉತ್ತಮ ಮಾರ್ಗ ಎಂದರೆ ಸ್ನೇಹಿತರ ಜೊತೆ ಸೇರಿ ಮನಸೋ ಇಚ್ಛೆ ಚೆಸ್ ಆಡುವುದು. ಚದುರಂಗದಾಟದ ನಿಯಮಗಳ ಬಗ್ಗೆ ತಿಳಿದಿಲ್ಲದೇ ಇರುವವರಿಗೆ ಆಟವನ್ನು ಕಲಿಯಲು, ಈ ಆಟದ ತಂತ್ರಗಳ ಬಗ್ಗೆ ತಿಳಿಯಲು ಇದೊಂದು ಉತ್ತಮ ಅವಕಾಶ.

**ಆಟದ ಹಿನ್ನೆಲೆ ಮತ್ತು ಇತಿಹಾಸ**



ಚದುರಂಗವು ಚತುರಂಗದಿಂದ ಹುಟ್ಟಿಕೊಂಡಿದೆ ಎಂದು ನಂಬಲಾಗಿದೆ, ಇದರರ್ಥ 'ನಾಲ್ಕು ವಿಭಾಗಗಳು' ಪದಾತಿ ದಳ, ಅಶ್ವದಳ, ಆನೆ ಮತ್ತು ರಥ (ಪಾನ್, ನೈಟ್, ಬಿಷಪ್ ಮತ್ತು ಆಧುನಿಕ ಆಟದಲ್ಲಿ ರೂಕ್) ಅಥವಾ ದಳಗಳ ವಿಭಾಗವನ್ನು ಉಲ್ಲೇಖಿಸುತ್ತದೆ.

600 CE ಸುಮಾರಿಗೆ ಸಸ್ಸಾನಿಡ್ ಪರ್ಷಿಯಾಕ್ಕೆ ಆಟವು ಆಗಮಿಸಿದಾಗ, ಇದನ್ನು ಚತ್ರಂಗ್ ಎಂದು ಕರೆಯಲಾಯಿತು ನಂತರ ಶತ್ರಂಜ್ ಎಂದು ಕರೆಯಲಾಯಿತು. ಸುಮಾರು 600 CE ಯ ಪರ್ಷಿಯನ್ ಹಸ್ತಪ್ರತಿಯು ಭಾರತೀಯ ಉಪಖಂಡದ ರಾಯಭಾರಿಯು ರಾಜ ಖೋಸ್ರೋ I(531 – 579 CE)ಗೆ ಆಟವನ್ನು ನೀಡುತ್ತಿರುವುದನ್ನು ವಿವರಿಸುತ್ತದೆ.

ಅಬ್ಬಾಸಿಡ್ ಚೆಸ್ ಮಾಸ್ಟರ್ಸ್ ಅಲ್–ಸುಲಿ ಮತ್ತು ಅಲ್–ಲಜ್ಲಾಜ್ ಅವರು 900 CE ನಲ್ಲಿ ತಂತ್ರಗಳು ಮತ್ತು ಕಾರ್ಯತಂತ್ರದ ಕುರಿತು ಕೃತಿಗಳನ್ನು ರಚಿಸಿದರು ಮತ್ತು 1000 CE ಯ ವೇಳೆಗೆ, ಚೆಸ್ ಯುರೋಪಿನಾದ್ಯಂತ ಜನಪ್ರಿಯವಾಗಿತ್ತು.

**ಆಟದ ಮಹತ್ವ**

ಚದುರಂಗವು ಕೈಗೆಟುಕುವ ಆಟವಾಗಿದ್ದು ಅದು ಬೌದ್ಧಿಕ ಸಾಮರ್ಥ್ಯಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಈ ಆಟವು ಜನರಲ್ಲಿ ಒಳಗೊಳ್ಳುವಿಕೆ ಮತ್ತು ಸಹಿಷ್ಣುತೆ, ಪರಸ್ಪರ ಗೌರವ ಮತ್ತು ನ್ಯಾಯಸಮ್ಮತತೆಯನ್ನು ಉತ್ತೇಜಿಸುತ್ತದೆ. ಯುಎನ್ ವೆಬ್‌ಸೈಟ್‌ನಲ್ಲಿ ಗಮನಿಸಿದಂತೆ, ಯುಎನ್‌ನ ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಸುಸ್ಥಿರ ಅಭಿವೃದ್ಧಿಗಾಗಿ 2030 ರ ಕಾರ್ಯಸೂಚಿಯಲ್ಲಿ ಇದು ಪ್ರಮುಖ ಪಾತ್ರವನ್ನು ಹೊಂದಿದೆ.

ಇತಿಹಾಸದುದ್ದಕ್ಕೂ, ಆಟಗಳು ಮತ್ತು ಕ್ರೀಡೆಗಳು ಆತಂಕಗಳನ್ನು ಕಡಿಮೆ ಮಾಡುವ ಮೂಲಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುವ ಮೂಲಕ ಬಿಕ್ಕಟ್ಟಿನ ಸಮಯದಲ್ಲಿ ಬದುಕುಳಿಯಲು ಮಾನವೀಯತೆಗೆ ಸಹಾಯ ಮಾಡಿದೆ. ಕೋವಿಡ್ 19 ಸೋಂಕಿಗೆ ಕಾರಣವಾದ ವೈರಸ್ ಏಕಾಕಿ ಹೆಚ್ಚಿನ ಗೇಮಿಂಗ್ ಮತ್ತು ಕ್ರೀಡಾ ಚಟುವಟಿಕೆಯಲ್ಲಿ ಜನ ತೊಡಗಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಿಸಿತು. ಮನೆಯೊಳಗೆ ಆಡಬಹುದಾದ ಆಟ ಎಂಬ ಕಾರಣಕ್ಕೆ ಚೆಸ್ ಹೆಚ್ಚು ಪ್ರಾಮುಖ್ಯತೆ ಪಡೆಯಿತು. ಚೆಸ್ ಬೃಹತ್ ಬೆಳವಣಿಗೆ ಮತ್ತು ಬದಲಾವಣೆ ಎರಡನ್ನೂ ಕಂಡಿದೆ. ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಹೆಚ್ಚಾಗಿ ನಡೆಯುತ್ತಿರುವ ಚೆಸ್ ಈವೆಂಟ್‌ಗಳಲ್ಲಿ ಭಾಗವಹಿಸಲು ಎಂದಿಗಿಂತಲೂ ಹೆಚ್ಚು ಆಟಗಾರರು ಭಾಗವಹಿಸುತ್ತಿರುವುದು ವಿಶೇಷವಾಗಿದೆ. ॐ

## ಮನೆ ಮದ್ದು :

**ಸೀತಾಫಲ ಹಣ್ಣು ಮತ್ತು ಅದರ ಬೀಜದ ಉಪಯೋಗ**

ಸೀತಾಫಲ ಹಣ್ಣಿನಲ್ಲಿ ಮಾತ್ರ ಅಲ್ಲ, ಅದರ ಬೀಜದಲ್ಲಿ ಈ ಹಣ್ಣಿನ ತೊಗಟೆಯ ಎಲೆಗಳಲ್ಲಿ ಆರೋಗ್ಯಕ್ಕೆ ಲಾಭಗಳು ಇವೆ. ಸೀತಾಫಲ ಹಣ್ಣಿನ ಎಲೆಯನ್ನು ಅಥವಾ ತೊಗಟೆಯನ್ನು ಒಣಗಿಸಿ ಅದನ್ನು ಪುಡಿಮಾಡಿ ನೀರಿನಲ್ಲಿ ಬೆರೆಸಿ ತಲೆಗೆ ಹಚ್ಚುವುದರಿಂದ ಹೊಟ್ಟಿನ ಸಮಸ್ಯೆ ಮತ್ತು ಹೇನುಗಳು ಸಮಸ್ಯೆ ದೂರವಾಗುತ್ತದೆ.

# ಮಧುಮೇಹ (ಸಕ್ಕರೆ ಕಾಯಿಲೆ)ಯ ಬಗ್ಗೆ ಜನಸಾಮಾನ್ಯರು ತಿಳಿಯಬೇಕಾದುದೇನು?




✍ ಡಾ. ಅಮೂಲ್ಯ ಎನ್

ಸಮುದಾಯ ವೈದ್ಯ ಶಾಸ್ತ್ರ ವಿಭಾಗ

ಮಧುಮೇಹ ಅಥವಾ ಸಕ್ಕರೆ ಕಾಯಿಲೆ (ಡಯಾಬಿಟಿಸ್), ಒಂದು ದೀರ್ಘಕಾಲಿಕ ಆರೋಗ್ಯ ಸಮಸ್ಯೆ ಆಧುನಿಕತೆಯಿಂದ ಬದಲಾಗುತ್ತಿರುವ ನಮ್ಮ ಜೀವನ ಶೈಲಿಯಿಂದ ಈ ಕಾಯಿಲೆ ದಿನೇ ದಿನೇ ಹೆಚ್ಚುತ್ತಿದೆ.

ನಮ್ಮ ದೇಶದ ಶೇಕಡ 9.6 ರಷ್ಟು ಜನರಲ್ಲಿ ಮಧುಮೇಹವಿದೆ. ಭಾರತವು 2030 ನೇ ಇಸವಿ ಅಷ್ಟರಲ್ಲಿ ಚೀನಾ ದೇಶವನ್ನು ಹಿಂದಿಕ್ಕಿ ಜಗತ್ತಿನ ಮಧುಮೇಹ ರಾಜಧಾನಿಯಾಗುವತ್ತ ಕಡೆ ಸಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**ಮಧುಮೇಹ ಎಂದರೇನು?**

ನಮ್ಮ ರಕ್ತದಲ್ಲಿರುವ ಸಕ್ಕರೆಯನ್ನು ಮೇಧೋಜ್ಜೀರಕ ಗ್ರಂಥಿಯಿಂದ ಉತ್ಪಾದನೆಯಾಗುವ ಇನ್ಸುಲಿನ್ ಎಂಬ ಹಾರ್ಮೋನ್ ನಿಯಂತ್ರಿಸುತ್ತದೆ. ದೇಹದ ಎಲ್ಲಾ ಜೀವಕೋಶಗಳು ಸಕ್ಕರೆಯನ್ನು ಬಳಸಿಕೊಳ್ಳಲು ಇನ್ಸುಲಿನ್ ಸಹಾಯ ಮಾಡುತ್ತದೆ. ದೇಹದಲ್ಲಿರುವ ಇನ್ಸುಲಿನ್ ಉತ್ಪಾದನೆ ಕಡಿಮೆಯಾದಾಗ ಅಥವಾ ಇನ್ಸುಲಿನ್‌ಗೆ ಪ್ರತಿರೋಧ ಉಂಟಾದಾಗ ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಾಗಿ ಮಧುಮೇಹ ಕಂಡುಬರುತ್ತದೆ.

**ಮಧುಮೇಹದಲ್ಲಿ ಎರಡು ವಿಧ**

**1. ಟೈಪ್ 1 (ಇನ್ಸುಲಿನ್ ಅವಲಂಬಿತ) :** ಇದು ಇನ್ಸುಲಿನ್ ಕೊರತೆಯಿಂದ ಉಂಟಾಗುತ್ತದೆ. ಇದು ಚಿಕ್ಕ ವಯಸ್ಸಿನವರಲ್ಲಿ ಕಾಣಿಸಿಕೊಳ್ಳುತ್ತದೆ.

**2. ಟೈಪ್ 2 (ಇನ್ಸುಲಿನ್ ಪ್ರತಿರೋಧ) :** ಇನ್ಸುಲಿನ್‌ಗೆ ಜೀವಕೋಶಗಳು ಸ್ಪಂದಿಸದಿದ್ದಾಗ ಈ ವಿಧ ಉಂಟಾಗುತ್ತದೆ. 40 ವರ್ಷ ಮೇಲ್ಪಟ್ಟವರಲ್ಲಿ ಕಾಣಿಸಿಕೊಳ್ಳುತ್ತದೆ.

ಗರ್ಭಾವಸ್ಥೆಯಲ್ಲಿಯೂ ಕೂಡ ಮಧುಮೇಹ ಕಾಣಿಸಿಕೊಳ್ಳಬಹುದು

**ಮಧುಮೇಹದ ಲಕ್ಷಣಗಳು :**

– ಅತಿಯಾಗಿ ಬಾಯಾರಿಕೆಯಾಗುವುದು

– ಹೆಚ್ಚು ಬಾರಿ ಮೂತ್ರ ವಿಸರ್ಜನೆ ಮಾಡುವುದು

– ಹೆಚ್ಚು ಹಸಿವಾಗುವುದು

– ತೂಕ ಇಳಿಯುವಿಕೆ

– ಸುಸ್ತು, ಆಯಾಸ

– ದೀರ್ಘಕಾಲಿಕ ಮಾಗದ ಗಾಯ/ಹುಣ್ಣು

– ಕೈ ಕಾಲು ಜುಮ್ ಎನಿಸುವುದು.

ಆದರೆ ಕೆಲವರಲ್ಲಿ ಈ ಯಾವುದೇ ಲಕ್ಷಣಗಳು ಕಂಡು ಬರದೆ ಮಧುಮೇಹದ ದೀರ್ಘಕಾಲಿಕ ಪರಿಣಾಮಗಳಾದ ಮೂತ್ರಪಿಂಡ ವೈಫಲ್ಯ, ಲಕ್ವ, ದೃಷ್ಟಿಹೀನತೆ, ಹೃದಯಘಾತ, ಗ್ಯಾಂಗ್ರಿನ್, ರಕ್ತನಾಳಗಳ ಸಮಸ್ಯೆಗಳೇ ಮೊದಲ ರೋಗ ಲಕ್ಷಣವಾಗಿ ಕಂಡುಬರಬಹುದು.

**ಮಧುಮೇಹ ಯಾರಲ್ಲಿ ಹೆಚ್ಚು ಕಂಡು ಬರುತ್ತದೆ?**

ಬೊಜ್ಜು, ಸ್ಥೂಲಕಾಯವಿರುವವರಲ್ಲಿ, ದೈಹಿಕ ಚಟುವಟಿಕೆ ಇಲ್ಲದಿರುವವರಲ್ಲಿ, ಹೆಚ್ಚಾಗಿ ಮದ್ಯಪಾನ ಸೇವಿಸುವವರಲ್ಲಿ, ಕುಟುಂಬದ ಬೇರೆ ಸದಸ್ಯರಿಗೆ ಮಧುಮೇಹವಿದ್ದಾಗ ಈ ಸಕ್ಕರೆ ಕಾಯಿಲೆ ಹೆಚ್ಚಾಗಿ ಕಂಡುಬರುತ್ತದೆ.

**ಮಧುಮೇಹ ನಿರ್ವಹಣೆ**

ರೋಗಿಗಳು ನಿಯಮಿತವಾಗಿ ವೈದ್ಯರ ಭೇಟಿ ಮತ್ತು ಅಗತ್ಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು. ವೈದ್ಯರು ಸೂಚಿಸಿದ ಔಷಧಿಗಳನ್ನು (ಮಾತ್ರೆ ಅಥವಾ ಇನ್ಸುಲಿನ್ ಇಂಜೆಕ್ಷನ್) ಮತ್ತು ಅವರು ನೀಡಿದ ಸಲಹೆಗಳನ್ನು ಅನುಸರಿಸಬೇಕು, ಯಾವುದೇ ಕಾರಣಕ್ಕೂ ವೈದ್ಯರನ್ನು ಸಂಪರ್ಕಿಸದೆ ಔಷಧಿಗಳ ಸೇವನೆಯನ್ನು ನಿಲ್ಲಿಸಬಾರದು ಸಕ್ಕರೆ ಪ್ರಮಾಣ, ರಕ್ತದೊತ್ತಡ, ಬೊಜ್ಜಿನ ಪ್ರಮಾಣ, ದೃಷ್ಟಿ ಪರೀಕ್ಷೆ ಇಂತಹವನ್ನು ವೈದ್ಯರ ಸಲಹೆ ಮೇರೆಗೆ ಪರೀಕ್ಷಿಸಿಕೊಳ್ಳಬೇಕು. ನಿತ್ಯ ವ್ಯಾಯಾಮ, ಆರೋಗ್ಯಕರ ಆಹಾರ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು, ದುಶ್ಚಟಗಳಿಂದ ದೂರವಿರಬೇಕು.

**ಮಧುಮೇಹ ತಡೆಗಟ್ಟುವಿಕೆ**

**1.ದೈಹಿಕ ವ್ಯಾಯಾಮ :** ವಾರದಲ್ಲಿ ಐದು ದಿನವಾದರೂ 35–45 ನಿಮಿಷಗಳ ನಡಿಗೆ ಅಗತ್ಯ. ಆಟೋಟಗಳಲ್ಲಿ ತೊಡಗಿಸಿಕೊಳ್ಳುವುದು, ಯೋಗಾಭ್ಯಾಸ ಇವುಗಳನ್ನು ನಿಮ್ಮ ಜೀವನ ಶೈಲಿಯಲ್ಲಿ ಅಳವಡಿಸಿಕೊಳ್ಳಬೇಕು. ಹೀಗೆ ನಿತ್ಯ ವ್ಯಾಯಾಮ ಮಾಡಿದರೆ ದೇಹದ ಬೊಜ್ಜು ಕರಗಿ ತೂಕ ಕಡಿಮೆಯಾಗುವುದರಿಂದ ಮಧುಮೇಹವನ್ನು ತಡೆಗಟ್ಟಬಹುದು.

**2. ಆಹಾರ ಪದ್ಧತಿ :** ಕಾರ್ಬೋಹೈಡ್ರೇಟ್ (ಸಿಂಪಲ್ ಶುಗರ್) ಸೇವನೆಯನ್ನು ಮತ್ತು ಕೊಬ್ಬಿನಂಶ ಸೇವನೆಯನ್ನು ಕಡಿಮೆ ಮಾಡಬೇಕು. ಸಿಹಿ ತಿನಿಸುಗಳು, ಜ್ಯೂಸ್, ಬೇಕರಿ ಪದಾರ್ಥಗಳು, ಕರಿದ ತಿಂಡಿಗಳು ಇಂತಹವನ್ನು ಕಡಿಮೆ ಮಾಡಿ ಹೆಚ್ಚಾಗಿ ಸೊಪ್ಪು, ತರಕಾರಿ, ಕಾಳು ಸೇವಿಸಬೇಕು. ಅಕ್ಕಿ, ಗೋಧಿ, ರಾಗಿ, ನವಣೆ ಇಂತಹ ಧಾನ್ಯಗಳ ಸೇವನೆಯು ಅಗತ್ಯ, ಆದರೆ ಪ್ರಮಾಣ ಕಡಿಮೆ ಮಾಡಬೇಕು. ಮಾಂಸಾಹಾರಿಗಳು ಕೊಬ್ಬಿನಂಶ ಕಡಿಮೆ ಇರುವ ಮಾಂಸವನ್ನು ಸೇವಿಸಬೇಕು.

3. ಮಾನಸಿಕ ಒತ್ತಡದಿಂದಾಗಿಯೂ ಮಧುಮೇಹ ಕಾಣಿಸಿಕೊಳ್ಳಬಹುದು. ಮಾನಸಿಕ ಒತ್ತಡ ನಿರ್ವಹಣೆಗಾಗಿ ಧ್ಯಾನ ಮಾಡುವ ಹವ್ಯಾಸ ಬೆಳೆಸಿಕೊಳ್ಳುವುದರಿಂದ ಒತ್ತಡ ಕಡಿಮೆ ಮಾಡಿಕೊಳ್ಳಬಹುದು. ಜೊತೆಗೆ ಅತಿಯಾದ ಮಧ್ಯ ಸೇವನೆ ಮತ್ತು ಧೂಮಪಾನದಿಂದ ದೂರವಿರಬೇಕು.

"ಮನಸ್ಸಿದ್ದರೆ ಮಾರ್ಗ"ಎಂಬಂತೆ ಈ ರೀತಿಯಲ್ಲಿ ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡರೆ ಮಧುಮೇಹ ದಂತಹ ಅಪಾಯಕಾರಿ ಕಾಯಿಲೆಯಿಂದ ನಾವು ದೂರವಿರಬಹುದು. ॐ

"ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇದೆ!"

# ಒಳ್ಳೆಯ ಸ್ನೇಹಿತ



ಇಬ್ಬರು ಆತ್ಮೀಯ ಸ್ನೇಹಿತರಿದ್ದರು. ಒಮ್ಮೆ ದೂರದ ಊರಿಗೆ ಹೋಗುವಾಗ ಇಬ್ಬರ ಮಧ್ಯೆ ಸಣ್ಣ ಕಲಹ ಪ್ರಾರಂಭವಾಯಿತು. ಮಾತಿನ ಭರದಲ್ಲಿ ಒಬ್ಬ ಸ್ನೇಹಿತ ಅನಿರೀಕ್ಷಿತವಾಗಿ ಮತ್ತೊಬ್ಬನ ಮೇಲೆ ಕೈಮಾಡಿದ. ಹೊಡೆಸಿ ಕೊಂಡವ, ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಮೌನವಾಗಿ ಸಹಿಸಿಕೊಂಡು ಸ್ನೇಹಿತನನ್ನು ಕ್ಷಮಿಸಿದ. ಅಲ್ಲೇ ಒಂದೆಡೆ ಇದ್ದ ಮರಳು ಗುಡ್ಡೆಯಲ್ಲಿ ತನ್ನ ಬೆರಳುಗಳಿಂದ 'ಇವತ್ತು ನನ್ನ ಆತ್ಮೀಯ ಸ್ನೇಹಿತ ನನ್ನ ಮೇಲೆ ಕೈ ಮಾಡಿದ' ಎಂದು ಬರೆದ. ಹೊಡೆದಿದ್ದ ಮಿತ್ರ ಅದನ್ನು ಓದಿದ. ಅವನ ಕೋಪ ಇಳಿದು, ಅವನಿಗೆ ತನ್ನ ತಪ್ಪಿನ ಅರಿವಾಯಿತು. ಮಿತ್ರನಲ್ಲಿ ಕ್ಷಮೆಯಾಚಿಸಿದ.

ಕೆಲ ಸಮಯದ ನಂತರ ಇಬ್ಬರೂ ನದೀ ತೀರಕ್ಕೆ ಬಂದರು. ನದಿಯಲ್ಲಿ ಸ್ನಾನ ಮಾಡುವ ಆಸೆಯಿಂದ ನೀರಿಗಿಳಿದರು. ಏಟು ತಿಂದ ಮಿತ್ರ ಇಳಿದ ಜಾಗದಲ್ಲಿ ಹೆಚ್ಚು ಆಳ ಇದ್ದುದರಿಂದ ಆಯತಪ್ಪಿ ಜಾರಿಬಿದ್ದು ಅವನು ಮುಳುಗತೊಡಗಿದ. ಸಹಾಯಕ್ಕಾಗಿ ಕೂಗತೊಡಗಿದನು. ಅವನ ಕೂಗು ಕೇಳಿದ ತಕ್ಷಣವೇ ಏಟು ಕೊಟ್ಟ ಮಿತ್ರ ಅವನ ಸಹಾಯಕ್ಕೆ ಧಾವಿಸಿ ಆತನನ್ನು ರಕ್ಷಿಸಿದನು. ತನ್ನನ್ನು ಬದುಕಿಸಿದ ಮಿತ್ರನಿಗೆ ಧನ್ಯವಾದ ಅರ್ಪಿಸಿದ ಗೆಳೆಯ ಅಲ್ಲಿಯೇ ಇದ್ದ ಕಲ್ಲೊಂದರ ಮೇಲೆ 'ನನ್ನ ಆಪ್ತಮಿತ್ರನಿಂದಾಗಿ ಇಂದು ನನಗೆ ಪುನರ್ಜನ್ಮವಾಯಿತು' ಎಂದು ಕಷ್ಟಪಟ್ಟು ಕೆತ್ತಿ ಬರೆದ.

ಸಹಾಯ ಮಾಡಿದ ಮಿತ್ರನಿಗೆ ಸೋಜಿಗವಾಯಿತು. ತಡೆಯಲಾರದೆ ಕೇಳಿದ, "ಇದೇನು? ಆಗ ನಾನು ಹೊಡೆದಾಗ, ಹೊಡೆದಿದ್ದೇನೆ ಎಂದು ಮರಳಿನಲ್ಲಿ ಬರೆದೆ. ಈಗ ಬದುಕಿಸಿದ್ದಾನೆ ಎಂದು ಕಲ್ಲಿನ ಮೇಲೆ ಬರೆದಿದ್ದೀಯಾ? ಕಲ್ಲಿನಲ್ಲಿ ಮತ್ತು ಮರಳಿನಲ್ಲಿ ಬರೆದಿರುವುದು ಏನು ವಿಶೇಷ?" ಎಂದು ಕೇಳಿದನು. ಆಗ ಬದುಕುಳಿದ ಮಿತ್ರನು, "ಗೆಳೆಯಾ ನಮಗೆ ಯಾರಾದರೂ ನೋಯಿಸಿದರೆ ಅದನ್ನು ಮರಳಿನಲ್ಲಿ ಬರೆಯಬೇಕು. ನೋವನ್ನು ಮರಳಿನಲ್ಲಿ ಬರೆದರೆ, ಯಾವತ್ತೋ ಕ್ಷಮೆ ಎಂಬ ಗಾಳಿ ಬೀಸಿ ಆ ಕಹಿ ನೆನಪನ್ನು ಅಳಿಸಿ ಹಾಕುತ್ತದೆ. ಇನ್ನು ಯಾರಾದರೂ ನಮಗೆ ಉಪಕಾರ ಮಾಡಿದರೆ, ಕಲ್ಲಿನಲ್ಲಿ ಬರೆದಾಗ ಅದು ನೆನಪಿನಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ" ಎಂದು ಹೇಳಿದನು. ಈ ಮೂಲಕ ನಿಜವಾದ ಸ್ನೇಹದ ಅರ್ಥ ತಿಳಿಸಿದನು.


ನಿಜ! ನೋವನ್ನು ಮರೆಯಬೇಕು, ಉಪಕಾರದ ಸ್ಮರಣೆಯಿರಬೇಕು. ಇದೇ ನಿಜವಾದ ಸ್ನೇಹದಲ್ಲಿ ಇರಬೇಕಾದ ಒಳ್ಳೆಯ ಗುಣ. ॐ

## ಸಮೃದ್ಧಿ ಸುಜ್ಞಾನ



ಮನುಷ್ಯ ಎಷ್ಟೇ ಬಲಶಾಲಿಯಾದರೂ
ದೌರ್ಬಲ್ಯ ಮೂಡಿದಲ್ಲಿ ಏನನ್ನೂ
ಸಾಧಿಸಲಾಗದು, ಪ್ರಯತ್ನಶೀಲನಾದಾಗ
ಮಾತ್ರ ಉದ್ದಿಷ್ಟ ಗುರಿಯನ್ನು
ಮುಟ್ಟಲು ಸಾಧ್ಯ

ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ





# ಗುರು ಪೂರ್ಣಿಮೆ

ಗುರು ಪೂರ್ಣಿಮೆ ಹಿಂದೂಗಳ ಧಾರ್ಮಿಕ ಆಚರಣೆ. ಈ ದಿನದಂದು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಗುರುಗಳನ್ನು ಗೌರವಿಸುವ ಸಲುವಾಗಿ ಆಚರಿಸಲಾಗುತ್ತದೆ. ಮಹಾತ್ಮ ಗಾಂಧೀಜಿಯವರು ತಮ್ಮ ಆಧ್ಯಾತ್ಮಿಕ ಗುರು ಶ್ರೀಮದ್ ರಾಮಚಂದ್ರ ಅವರಿಗೆ ಗೌರವ ಸಲ್ಲಿಸಲು ಈ ದಿನವನ್ನು ಪುನರುಜ್ಜೀವನ ಗೊಳಿಸಿದರು, ಅಂದಿನಿಂದ ಈ ಹಬ್ಬವನ್ನು ವ್ಯಾಸ ಪೂರ್ಣಿಮಾ ಎಂದೂ ಕೂಡ ಕರೆಯಲಾಗುತ್ತದೆ.

ಗುರು ಪೂರ್ಣಿಮೆಯು ಭಾರತದಲ್ಲಿ ತನ್ನ ಆಧ್ಯಾತ್ಮಿಕ ಅಥವಾ ಶೈಕ್ಷಣಿಕ ಗುರುಗಳ ಗೌರವಾರ್ಥವಾಗಿ, ಅವರಿಗೆ ನಮನ ಸಲ್ಲಿಸಲು ಮತ್ತು ಅವರಿಗೆ ಗೌರವವನ್ನು ತೋರಿಸಲು ಆಚರಿಸಲಾಗುತ್ತದೆ. ಮಾನವರಾದ ನಮ್ಮೆಲ್ಲರ ಬದುಕನ್ನು ಕಟ್ಟುವಲ್ಲಿ ಗುರುಗಳ ಪಾತ್ರ ಪ್ರಮುಖವಾಗಿದೆ.

ನಮ್ಮನ್ನು ರೂಪಿಸಲು ಕಾರಣಕರ್ತರಾದ ಗುರುಗಳ ಬಗ್ಗೆ ಕೃತಜ್ಞತಾ ಭಾವವನ್ನು ಕಾಪಾಡಿಕೊಳ್ಳಬೇಕು ಎಂದು ಅದನ್ನು ವ್ಯಕ್ತಪಡಿಸುವ ದಿನವಾಗಿ ಗುರು ಪೂರ್ಣಿಮೆ ಹಬ್ಬವನ್ನು ಆಚರಿಸಲಾಗುತ್ತದೆ. ಹಿಂದೂಗಳ ಸಂಪ್ರದಾಯದ ಪ್ರಕಾರ, ಗುರು ಪೂರ್ಣಿಮಾ ಹಬ್ಬವನ್ನು ಆಷಾಢದ ಶುಕ್ಲ ಪಕ್ಷದ ಹುಣ್ಣಿಮೆಯ ದಿನದಂದು ಆಚರಿಸಲಾಗುತ್ತದೆ. ಈ ಹಬ್ಬ ಸಾಮಾನ್ಯವಾಗಿ ಜೂನ್ ಅಥವಾ ಜುಲೈ ತಿಂಗಳಲ್ಲಿ ಬರುತ್ತದೆ. ಈ ವರ್ಷ ಅದು ಜುಲೈ 21 ರಂದು ಅಂದರೆ ಭಾನುವಾರ ಆಚರಿಸಲಾಗುತ್ತದೆ.

**ಗುರುವಿಗೆ ಉತ್ತಮ ಸ್ಥಾನಮಾನ**

ಪೌರಾಣಿಕ ನಂಬಿಕೆಗಳ ಪ್ರಕಾರ, ಮಹಾಭಾರತದ ಲೇಖಕ ವೇದವ್ಯಾಸರ ಜನ್ಮದಿನವನ್ನು ಗುರು ಪೂರ್ಣಿಮೆ ಎಂದು ಪರಿಗಣಿಸಲಾಗುತ್ತದೆ. ಅವರ ಗೌರವಾರ್ಥವಾಗಿ ಈ ದಿನವನ್ನು ವ್ಯಾಸ ಪೂರ್ಣಿಮಾ ಎಂದೂ ಕರೆಯುತ್ತಾರೆ. ಗುರು ಪೂರ್ಣಿಮೆಯ ದಿನದಂದು ಮಹರ್ಷಿ ವೇದ ವ್ಯಾಸರು ಎಲ್ಲಾ ನಾಲ್ಕು ವೇದಗಳನ್ನು ರಚಿಸಿದ ಈ ಕಾರಣಕ್ಕಾಗಿ ಅವರಿಗೆ ವೇದವ್ಯಾಸ ಎಂದು ಹೆಸರಿಸಲಾಯಿತು ಎಂದು ಗ್ರಂಥಗಳಲ್ಲಿ ಹೇಳಲಾಗಿದೆ.


ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಗುರುಗಳ ಪಾತ್ರ ಬಹಳ ಮಹತ್ವದ್ದಾಗಿದೆ. ಪುರಾತನ ನಾಗರಿಕತೆಯಾಗಲಿ ಅಥವಾ ಆಧುನಿಕ ಯುಗವೇ ಆಗಿರಲಿ, ಸಮಾಜವನ್ನು ಕಟ್ಟುವಲ್ಲಿ ಗುರುಗಳ ಪಾತ್ರ ಮಹತ್ವದ್ದಾಗಿದೆ. ಸಂತ ಕಬೀರದಾಸರು ತಮ್ಮ ಈ ಪಾತ್ರವನ್ನು ಸರಳ ಮತ್ತು ನಿಗೂಢ ರೂಪದಲ್ಲಿ ತಮ್ಮ ದ್ವಿಪದಿಗಳ ಮೂಲಕ ತೋರಿಸಿದ್ದಾರೆ.

ಅವರು ಬರೆದಂತೆ– ಗುರುವಿನ ಕೃಪೆ ಸಿಗದ ತನಕ, ಒಬ್ಬ ವ್ಯಕ್ತಿಯು ಅಜ್ಞಾನದ ಕತ್ತಲೆಯಲ್ಲಿ ಅಲೆದಾಡುತ್ತಾನೆ ಮತ್ತು ಭ್ರಮೆಯ ಬಂಧಗಳಲ್ಲಿ ಬಂಧಿತನಾಗಿರುತ್ತಾನೆ. ಅವನು ಮೋಕ್ಷವನ್ನು ಪಡೆಯುವುದಿಲ್ಲ. ಗುರುವಿಲ್ಲದಿದ್ದರೆ, ಅವನಿಗೆ ಸತ್ಯ ಮತ್ತು ಅಸತ್ಯದ ನಡುವಿನ ವ್ಯತ್ಯಾಸವು ತಿಳಿಯುವುದಿಲ್ಲ, ಸರಿ ಮತ್ತು ತಪ್ಪುಗಳ ಜ್ಞಾನವೂ ಕೂಡ ಇರುವುದಿಲ್ಲ.

ಪುರಾಣಗಳ ಪ್ರಕಾರ, ಜಗತ್ ಗುರು ಶಿವನು ಸಪ್ತಋಷಿಗಳಿಗೆ ಯೋಗವನ್ನು ಕಲಿಸಲು ಪ್ರಾರಂಭಿಸಿದನು. ಆಧುನಿಕ ಕಾಲದಲ್ಲಿ, ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ತಮ್ಮ ಆಧ್ಯಾತ್ಮಿಕ ಗುರುಗಳಾದ ಶ್ರೀಮದ್ ರಾಮಚಂದ್ರ ಅವರಿಗೆ ಗೌರವ ಸಲ್ಲಿಸಲು ಗುರು ಪೂರ್ಣಿಮೆಯ ದಿನವನ್ನು ಆರಿಸಿಕೊಂಡಿದ್ದರು.



ಗುರು ಪೂರ್ಣಿಮಾ ಹಬ್ಬವನ್ನು ಭಾರತದಲ್ಲಿ ಮಾತ್ರವಲ್ಲದೆ ನೇಪಾಳ ಮತ್ತು ಭೂತಾನ್‌ನಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತದೆ.



ನೇಪಾಳದಲ್ಲಿ, ಗುರು ಪೂರ್ಣಿಮೆಯನ್ನು ಶಿಕ್ಷಕರ ದಿನವೆಂದು ಆಚರಿಸಲಾಗುತ್ತದೆ. ನಮ್ಮ ಭಾರತದಲ್ಲಿ ಮಾತ್ರ ಶಿಕ್ಷಕರ ದಿನವನ್ನು ಗುರು ಪೂರ್ಣಿಮೆಯ ದಿನದಂದು ಆಚರಿಸಲಾಗುವುದಿಲ್ಲ. ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ.

ಬೌದ್ಧ ಧರ್ಮವನ್ನು ನಂಬುವವರು ಭಗವಾನ್ ಬುದ್ಧನ ಸ್ಮರಣೆಗಾಗಿ ಗುರು ಪೂರ್ಣಿಮೆಯನ್ನು ಆಚರಿಸುತ್ತಾರೆ. ಅವರ ನಂಬಿಕೆಯ ಪ್ರಕಾರ, ಬುದ್ಧನು ಉತ್ತರ ಪ್ರದೇಶದ ಸಾರನಾಥದಲ್ಲಿ ಈ ದಿನದಂದು ತನ್ನ ಮೊದಲ ಧರ್ಮೋಪದೇಶವನ್ನು ನೀಡಿದನು. ಇದರ ನಂತರವೇ ಬೌದ್ಧ ಧರ್ಮ ಪ್ರಾರಂಭವಾಯಿತು ಎಂದು ನಂಬಲಾಗಿದೆ.

ಈ ದಿನ ಮಹರ್ಷಿ ವೇದವ್ಯಾಸರ ಜನಿಸಿದ್ದಾರೆ. ಅದಕ್ಕಾಗಿಯೇ ಗುರು ಪೂರ್ಣಿಮೆಯನ್ನು ವ್ಯಾಸ ಪೂರ್ಣಿಮಾ ಎಂದೂ ಕರೆಯಲಾಗುತ್ತದೆ. ಗುರು ಪೂರ್ಣಿಮಾದಂದು ಗುರುವನ್ನು ಆರಾಧಿಸಲಿಚ್ಛಿಸುವ ಶಿಷ್ಯರು ಗುರುವಿನ ಪಾದ ಪೂಜೆ ಮಾಡಿ ಅವರಿಗೆ ಗುರು ದಕ್ಷಿಣೆ ಸಮರ್ಪಿಸಬೇಕು.

ಹಿಂದೂ ಧರ್ಮದಲ್ಲಿ ಹುಣ್ಣಿಮೆಗೆ ವಿಶೇಷ ಮಹತ್ವವಿದೆ. ಈ ದಿನ ಪವಿತ್ರ ನದಿಗಳಲ್ಲಿ ಸ್ನಾನ, ದಾನ ಮತ್ತು ಧ್ಯಾನ ಮಾಡುವುದರಿಂದ ಪುಣ್ಯ ಫಲಗಳು ಪ್ರಾಪ್ತಿಯಾಗುತ್ತವೆ ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಹಾಗೆ ನೋಡಿದರೆ ವರ್ಷದಲ್ಲಿ 12 ಹುಣ್ಣಿಮೆಗಳು ಬರುತ್ತವೆ ಮತ್ತು ಹುಣ್ಣಿಮೆಯ ದಿನ ಪೂರ್ಣ ಚಂದ್ರೋದಯ ಗೋಚರಿಸುತ್ತದೆ. ಹುಣ್ಣಿಮೆಯ ದಿನದಂದು ಚಂದ್ರದೇವನನ್ನು ಪೂಜಿಸುವುದರಿಂದ ಅಪೇಕ್ಷಿತ ಫಲವನ್ನು ಪಡೆದುಕೊಳ್ಳಬಹುದು.

ಗುರು ಎಂಬ ಪದದಲ್ಲಿನ ಗು ಎಂಬ ಅಕ್ಷರಕ್ಕೆ ಅಂಧಕಾರವೆಂದುರು, ಎಂಬುದಕ್ಕೆ ಬೆಳಕು ಎಂದು ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ತರುವವನೇ ಗುರು. ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯ ಸಮಯದಲ್ಲಿ ಶಿಷ್ಯರನ್ನು ಗುರು ತನ್ನಾಶ್ರಮಕ್ಕೆ ಕರೆದೊಯ್ದು ಧಾರ್ಮಿಕ ಮತ್ತು ಲೌಕಿಕ ಶಿಕ್ಷಣಗಳೆರಡನ್ನು ನೀಡುತ್ತಿದ್ದರು. ಶಿಷ್ಯರು ತಮ್ಮ ಗುರುವಿನ ಬಗ್ಗೆ ಅನನ್ಯ ಭಕ್ತಿಯಿಂದ ಇದ್ದು ವಿದ್ಯಾರ್ಜನೆ ಮಾಡುತ್ತಿದ್ದರು. ಆ ಗುರುಗಳ ಆಶ್ರಮದಲ್ಲಿದ್ದುಕೊಂಡು ಗುರುಗಳ ಸೇವೆ ಮಾಡಿ ಅವರ ಮನೆಯ ಎಲ್ಲ ಕೆಲಸಗಳನ್ನು ಭಕ್ತಿಯಿಂದ ಶ್ರದ್ಧೆಯಿಂದ ಶುದ್ಧ ಮನಸ್ಸಿನಿಂದ ಸ್ವಾರ್ಥರಹಿತರಾಗಿ ಮಾಡಿ ಗುರುಕೃಪೆಗೆ ಪಾತ್ರರಾಗುತ್ತಿದ್ದರು. ತನ್ನನ್ನು ಮೆಚ್ಚಿಸುವ ಶಿಷ್ಯನಿಗೆ ಗುರು ಅನುಗ್ರಹ ಮಾಡುತ್ತಿದ್ದರು.



**ಗುರು ಪೂರ್ಣಿಮಾ ದಿನದ ಮಹತ್ವ**

ಹುಟ್ಟಿನಿಂದಲೇ ಯಾರೂ ಪಂಡಿತರಲ್ಲ. ಎಲ್ಲರಿಗೂ ಜ್ಞಾನದ ಅವಶ್ಯಕತೆ ಬೇಕೇ ಬೇಕು. ನಮ್ಮ ಜೀವನದಲ್ಲಿ ಎದುರಾಗುವ ಸಮಸ್ಯೆ, ಸಿಗುವ ಪಾಠ, ತಿಳಿಸುವ ಜ್ಞಾನ ಇವೆಲ್ಲವನ್ನೂ ಕಲಿಸುವ ಎಲ್ಲರೂ ಗುರುಗಳೇ. ಜೀವನವನ್ನು ಸಾರ್ಥಕಗೊಳಿಸಿದ ಗುರುವನ್ನು ಈ ದಿನ ಸ್ಮರಿಸಬೇಕು. ನಮ್ಮ ವೇದಗಳು ಆಚಾರ್ಯ ದೇವೋಭವ ಎಂದು ಗುರುಗಳನ್ನು ಮನಸಾ ಇಚ್ಛೆ ಗೌರವಿಸಿದ್ದಲ್ಲದೆ ಅವರಿಗೆ ತಂದೆ–ತಾಯಿಗಳಿಗಿಂತ ಮಿಗಿಲಾದ ಸ್ಥಾನವನ್ನೂ ನೀಡಿದೆ. ॐ



# ವೈದ್ಯರ ದಿನ

ಡಾ. ಬಿಧನ್ ಚಂದ್ರ ರಾಯ್ ಅವರು ಜುಲೈ 1, 1882 ರಂದು ಜನಿಸಿದರು ಮತ್ತು 1962 ಜುಲೈ 1 ರಂದೇ ತಮ್ಮ 80ನೇ ವಯಸ್ಸಿನಲ್ಲಿ ನಿಧನರಾದರು. ಆದ್ದರಿಂದ ಅವರ ಪರಂಪರೆಯನ್ನು ಗೌರವಿಸುವ ಸಲುವಾಗಿ ಭಾರತದಲ್ಲಿ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಇದು ಮಾನವೀಯತೆಯ ದಣಿವರಿಯಿಲ್ಲದೆ ಸೇವೆ ಸಲ್ಲಿಸುವ ಎಲ್ಲಾ ವೈದ್ಯರಿಗೆ ಸಮರ್ಪಿತವಾದ ದಿನವಾಗಿದೆ. ಈ ದಿನವನ್ನ ವೈದ್ಯರಿಗೆ ವಿಶೇಷ ಗೌರವ ನೀಡುವ ಸಲುವಾಗಿ ಭಾರತದಲ್ಲಿ 1991 ರಲ್ಲಿ ಮೊದಲ ಬಾರಿ ವೈದ್ಯರ ದಿನವನ್ನು ಆಚರಿಸಲಾಯಿತು.


ಮನುಷ್ಯನಿಗೆ ಆರೋಗ್ಯವೇ ಭಾಗ್ಯ ಎಂಬುದು ಸರ್ವಕಾಲಿಕ ಮಾತು. ಇದು ಅಷ್ಟೇ ಸತ್ಯವೂ ಕೂಡ. ಆರೋಗ್ಯವನ್ನು ರಕ್ಷಿಸುವುದು, ಅನಾರೋಗ್ಯಕ್ಕೆ ಮದ್ದು ನೀಡಿ ಗುಣ ಪಡಿಸುವುದು ವೈದ್ಯರ ಕರ್ತವ್ಯವಾಗಿದೆ. ವೈದ್ಯೋ ನಾರಾಯಾಣ ಹರಿ ಎನ್ನುವುದು ಅದಕ್ಕೆ ಸಾಕ್ಷಿಯಾಗಿದೆ. ಅದಕ್ಕಾಗಿ ವೈದ್ಯರನ್ನ ದೇವರಿಗೆ ಹೋಲಿಸಲಾಗುತ್ತದೆ. ಈ ಪದ್ಧತಿಯು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ.

ಅನಾರೋಗ್ಯಕ್ಕೆ ತುತ್ತಾದ ಪ್ರತಿಯೊಬ್ಬ ರೋಗಿಯನ್ನು ಸರಿಯಾದ ಚಿಕಿತ್ಸೆ ನೀಡುವ ಮೂಲಕ ಗುಣಪಡಿಸಿ, ಅವನಿಗೆ ಪುನರ್ಜನ್ಮ ನೀಡುವುದು ಪ್ರತಿಯೊಬ್ಬ ವೈದ್ಯರ ಕಾಯಕವಾದರೆ, ಅವರಿಗೆ ಗೌರವ ಸಲ್ಲಿಸುವುದು ನಮ್ಮ-ನಿಮ್ಮೆಲ್ಲರ ಕರ್ತವ್ಯವಾಗಿದೆ. ಇಂತಹ ಪುನರ್ಜನ್ಮ ನೀಡುವ ವೈದ್ಯರಿಗೆ ವಿಶೇಷ ಗೌರವ ನೀಡುವ ಸಲುವಾಗಿ ಪ್ರತಿ ವರ್ಷ ಜುಲೈ 1 ರಂದು ರಾಷ್ಟ್ರೀಯ ವೈದ್ಯರ ದಿನವನ್ನ ಆಚರಿಸಲಾಗುತ್ತದೆ.

ವೈದ್ಯರ ದಿನವನ್ನು ಭಾರತದಲ್ಲಿ 1991 ರಲ್ಲಿ ಮೊದಲ ಬಾರಿಗೆ ಆಚರಿಸಲಾಯಿತು. ಪಶ್ಚಿಮ ಬಂಗಾಳದ ಎರಡನೇ ಮುಖ್ಯಮಂತ್ರಿ ಹಾಗೂ ಶ್ರೇಷ್ಠ ವೈದ್ಯ ಬಿಧನ್ ಚಂದ್ರ ರಾಯ್ ನೀಡಿರುವ ಕೊಡುಗೆ ಪರಿಗಣಿಸಿ, ಅವರ ಜ್ಞಾಪಕಾರ್ಥವಾಗಿ ಪ್ರತಿ ವರ್ಷ ಜುಲೈ 1 ರಂದು ರಾಷ್ಟ್ರೀಯ ವೈದ್ಯ ದಿನವಾಗಿ ಆಚರಿಸಲು ತೀರ್ಮಾನಿಸಲಾಯಿತು. ಬಿಧನ್ ಚಂದ್ರ ರಾಯ್ ಅವರು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಹಿನ್ನೆಲೆಯಲ್ಲಿ ಅವರ ಜನ್ಮ ದಿನ ಮತ್ತು ಪುಣ್ಯಸ್ಮರಣೆ ದಿನವನ್ನೇ ರಾಷ್ಟ್ರೀಯ ವೈದ್ಯಕೀಯ ದಿನ ಎಂದು ಘೋಷಿಸಲಾಯಿತು.

ಪ್ರತಿ ವರ್ಷ ಭಾರತೀಯ ವೈದ್ಯಕೀಯ ಸಂಘವು, ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಆಯೋಜಿಸುತ್ತಿದ್ದು, ಈ ಮೂಲಕ ವೈದ್ಯರು ಮತ್ತು ಆರೋಗ್ಯ ವೃತ್ತಿಪರರಿಗೆ ವಿಶೇಷ ಗೌರವ ಸಲ್ಲಿಸಲಾಗುತ್ತದೆ. ಭಾರತದಲ್ಲಿ ಮಾತ್ರ ವೈದ್ಯರ ದಿನ ಆಚರಿಸಲಾಗುತ್ತಿಲ್ಲ. ಬದಲಿಗೆ ಬೇರೆ ಬೇರೆ ರಾಷ್ಟ್ರಗಳಲ್ಲಿ, ಬೇರೆ ಬೇರೆ ದಿನಾಂಕದಂದು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಣೆ ಮಾಡಲಾಗುತ್ತದೆ. ಭಾರತದಲ್ಲಿ ಜುಲೈ 1 ರಂದು ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತದೆ. ಅದೇ ರಿತಿ ಅಮೆರಿಕಾದಲ್ಲಿ ಮಾರ್ಚ್ 30 ರಂದು, ಕ್ಯೂಬಾದಲ್ಲಿ ಡಿಸೆಂಬರ್ 3ರಂದು, ಇರಾನ್‌ನಲ್ಲಿ ಆಗಸ್ಟ್ 23ರಂದು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಣೆ ಮಾಡಲಾಗುತ್ತದೆ, ಅಮೆರಿಕಾದಲ್ಲಿ 1933 ರ ಮಾರ್ಚ್ ತಿಂಗಳಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಆಚರಣೆ ಮಾಡಲಾಯಿತು. ॐ





# ಚಿಂತನೆ

## ದೇವರು ಯಾವ ರೂಪದಲ್ಲಿದ್ದಾನೆ..???

ಅದೊಂದು ಚಿಕ್ಕ ಹೋಟಲ್ ಹತ್ತಿರ ಹರೆಯದ ಹುಡುಗ ಕೈಯಲ್ಲಿ ಬಟ್ಟಲನ್ನು ಹಿಡಿದುಕೊಂಡು ಹೋಟಲ್ ಮಾಲೀಕನಿಗೆ ಅಣ್ಣಾ . ಹತ್ತು ಇಡ್ಲಿ ಕೊಡಿ, ಅಮ್ಮ ನಾಳೆ ಹಣ ಕೊಡುತ್ತೇನೆಂದು ಹೇಳಿದ್ದಾಳೆ ಎಂದನು.

ಹೋಟಲ್ ಮಾಲೀಕರು, ಅಮ್ಮನಿಗೆ ಹೇಳು ಈಗಾಗಲೇ ಬಹಳಷ್ಟು ಬಾಕಿ ಇದೆ ಎಂದೆನುತ್ತಾ ಬಟ್ಟಲನ್ನು ಕೊಡು, ಸಾಂಬಾರ್ ಹಾಕುತ್ತೇನೆ" ಎಂದನು. ಅವನು ಇಡ್ಲಿ ಪ್ಯಾಕೆಟ್ ಕಟ್ಟಿ ಮಗುವಿನ ಕೈಗೆ ಕೊಟ್ಟನು.

ಸರಿ ಅಮ್ಮನಿಗೆ ಹೇಳುತ್ತೇನೆ! ಎನ್ನುತ್ತ ಆ ಹುಡುಗ ಹೊರಟು ಹೋದನು. ಎಲ್ಲವನ್ನೂ ಗಮನಿಸುತ್ತಿದ್ದ ವ್ಯಕ್ತಿಯೊಬ್ಬ ಮಾಲೀಕನ ಬಳಿ ಹೋಗಿ ಈಗಾಗಲೇ ಬಾಕಿ ಇದೆ ಎಂದಿರಿ, ಮತ್ತೆ ಯಾಕೆ ಕೊಟ್ಟು ಕಳುಹಿಸಿದಿರಿ ಎಂದು ಕೇಳಿದನು.

ಆ ಮಾಲೀಕ " ನಾನು ಆಹಾರವನ್ನು ತಾನೇ ಕೊಟ್ಟಿರುವುದು" ಅಂಥ ಚಿಕ್ಕ ಮಕ್ಕಳು ಬಂದು ಕೇಳಿದರೆ ಇಲ್ಲ ಎನ್ನಲು ಮನಸ್ಸು ಬಾರದು! ಇವತ್ತಲ್ಲದಿದ್ದರೆ ನಾಳೆ ನನ್ನ ಹಣ ಸಿಗುತ್ತದೆ. ಇಲ್ಲದಿದ್ದರೆ, ಸ್ವಲ್ಪ ತಡವಾಗಿ ಬರಬಹುದು. ಹಣವು ಎಲ್ಲರಿಗೂ ಸುಲಭವಾಗಿ ಸಿಗುವುದಿಲ್ಲ. ಮಗುವಿಗೆ ಹಸಿವಾಗಿರಬಹುದು ಅದಕ್ಕೆ ಅವರ ತಾಯಿ ನನ್ನಲ್ಲಿಗೆ ಕಳುಹಿಸಿರಬಹುದು. ನಾನು ಕೊಡುತ್ತೇನೆ ಎಂಬ ನಂಬಿಕೆಯಿಂದ ಕಳಹಿಸಿದ್ದಾರೆ. ನಾನು ಆ ನಂಬಿಕೆಯನ್ನು ಹುಸಿ ಮಾಡಲಾರೆ. ಇದು ನನ್ನ ಕಷ್ಟ ಪಟ್ಟು ದುಡಿದ ಹಣ, ಹೇಗಿದ್ದರೂ ನನಗೆ ಬರುತ್ತದೆ, ನಾನು ಮೋಸ ಹೋಗಿಲ್ಲ, ಆದರೆ ಈಗ ಸದ್ಯ ಅವರ ಹಸಿವು ನೀಗುವುದು ಮುಖ್ಯವೆನಿಸಿತು! ನಾನು ಈಗ ಕೊಡದಿದ್ದರೆ ಮಗು ತಾಯಿಗಾಗಿ ಕದಿಯಬಹುದು! ಅಥವಾ ತಾಯಿ ಮಗುವನ್ನು ಭಿಕ್ಷೆಗೆ ಕಳುಹಿಸಬಹುದು! ಅಥವಾ ಮಗುವಿನ ಹಸಿವು ನೀಗಿಸಲು ತಾಯಿಯು ತಪ್ಪು ದಾರಿಯನ್ನು ಆರಿಸಿಕೊಳ್ಳಬಹುದು! ಈಗ ನನಗೆ ನಷ್ಟವಾಗಿರಬಹುದು, ಆದರೆ ಸಮಾಜದಲ್ಲಿ ಅಗಬಹುದಾದ ಮೂರು ತಪ್ಪು ಪ್ರಯತ್ನಗಳನ್ನು ನಿಲ್ಲಿಸಿದ್ದೇನೆ! ಅಥವಾ ತಡೆದಿದ್ದೇನೆ ಎನ್ನುವ ತೃಪ್ತಿನನಗಿದೆ, ಅಷ್ಟು ಸಾಕು. ಈ ರೀತಿ ಯೋಚಿಸಿದ ಆ ಮಾಲೀಕನಿಗೆ ಮನಸಿನಲ್ಲೇ ಪ್ರಣಾಮಗಳನ್ನು ಅರ್ಪಿಸಿದ ಆ ವ್ಯಕ್ತಿ.

ದೇವರು ಇಲ್ಲ ಎಂದು ಯಾರು ಹೇಳುವರು! ಇಂತಹ ಜನರ ಮನಸ್ಸಿನಲ್ಲಿದ್ದಾನೆ, ಖಂಡಿತವಾಗಿ ಇದ್ದಾನೆ!! ಯಾರಾದರೂ ನಮ್ಮನ್ನು ಹುಡುಕಿಕೊಂಡು ಬಂದರೆ ಖಂಡಿತಾ ಕೊಡುತ್ತೇವೆ ಎಂಬ ನಂಬಿಕೆಯಿಂದ ಬರುತ್ತಾರೆ.,.,, ನಮ್ಮ ಶಕ್ತಿಮೀರಿ ಸಹಾಯ ಮಾಡಿ ಎಂದು ನಾನು ಹೇಳುತ್ತಿಲ್ಲ ನಮ್ಮ ಕೈಲಾದ ಸಹಾಯ ಮಾಡಬಹುದಲ್ಲವೇ?? ನಮ್ಮಲ್ಲಿರುವುದರಲ್ಲಿಯೇ ಸ್ವಲ್ಪವನ್ನಾದರೂ ಕೊಡಬಹುದಲ್ಲವೇ??? ॐ

**ಸಮೃದ್ಧಿ ಸುಜ್ಞಾನ**

ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಮ್ಮಲ್ಲಿ ಗಟ್ಟಿಯಾಗಿದ್ದರೆ ಸೋಲು ನಮ್ಮನ್ನು ಎಂದೂ ಕೂಡ ಹಿಮ್ಮೆಟ್ಟುವುದಿಲ್ಲ.

# ಆನಂದ-ಶಂಕರ

ನಾ ಮಾಡಿದ ಕರ್ಮ ಬಲವಂತವಾದೊಡೆ ನೀ ಮಾಡುವುದೇನಿದೆ ಶ್ರೀಹರಿ!

ಬಹಳ ಹಿಂದಿನ ಕಥೆಯಿದು. ಗೌತಮೀ ಎನ್ನುವ ಬ್ರಾಹ್ಮಣ ಮಹಿಳೆ ತನ್ನ ಪುಟ್ಟ ಮಗನೊಂದಿಗೆ ವಾಸವಾಗಿದ್ದಳು. ಅದೊಂದು ದಿನ ಆ ಬಾಲಕ ಕಾಡಿನಲ್ಲಿರುವ ಕುಟೀರದ ಮುಂಭಾಗದಲ್ಲಿ ಆಡಿಕೊಂಡಿರುವಾಗ, ಸರ್ಪವೊಂದು ಆತನನ್ನು ಕಚ್ಚುತ್ತದೆ. ನೋವಿನಿಂದ ಒದ್ದಾಡಿದ ಬಾಲಕ ಪ್ರಾಣಬಿಡುತ್ತಾನೆ.

ಮಗನ ಸಾವನ್ನು ಕಣ್ಣಾರೆ ಕಂಡ ತಾಯಿಯ ಜೀವ ವಿಲವಿಲ ಎನ್ನುತ್ತದೆ. ಅವಳು ಶೋಕತಪ್ತಳಾಗಿ, ಪುತ್ರವಿಯೋಗದಿಂದ ತತ್ತರಿಸಿಹೋಗುತ್ತಾಳೆ. ಎದೆ ಬಡಿದುಕೊಂಡು ಎತ್ತರದ ಧ್ವನಿಯಲ್ಲಿ ಅಳತೊಡಗುತ್ತಾಳೆ. ಬಾಲಕನಿಗೆ ಹಾವು ಕಚ್ಚುವುದನ್ನು, ಆ ಬಾಲಕ ಪ್ರಾಣಬಿಡುವುದನ್ನು ಮತ್ತು ಮಾತೃಹೃದಯದ ಘೋರ ವಿಲಾಪವನ್ನು ಅಲ್ಲಿಯೇ ಇದ್ದ ಅರ್ಜುನಕನೆಂಬ ವ್ಯಾಧನೊಬ್ಬ ಗಮನಿಸಿಕೊಂಡಿರುತ್ತಾನೆ. ಮಗನನ್ನು ಕಳೆದುಕೊಂಡು ರೋಧಿಸುತ್ತಿರುವ ಮಾತೆಯ ಸಂಕಟವನ್ನು ಆತನಿಂದ ನೋಡಲಾಗುವುದಿಲ್ಲ. ಬಾಲಕನನ್ನು ಕಚ್ಚಿದ ಹಾವಿನ ಮೇಲೆ ಆತನಿಗೆ ವಿಪರೀತ ಕೋಪ ಬರುತ್ತದೆ. ಆ ಕೂಡಲೇ ಆತ ಅಲ್ಲಿಯೇ ಪೊದೆಯಲ್ಲಿ ಅಡಗಿಕೊಂಡಿದ್ದ ಹಾವನ್ನು ಹಿಡಿದೆಳೆದು ಹೊರಗೆ ತೆಗೆಯುತ್ತಾನೆ.

ಪುತ್ರಶೋಕದಿಂದ ಜರ್ಜರಿತಳಾದ ಗೌತಮಿಯ ಎದುರಿನಲ್ಲಿ ಹಾವನ್ನು ಹಿಡಿದು ನಿಂತು, "ತಾಯಿ, ನಿಮ್ಮ ಮಗನನ್ನು ಕಚ್ಚಿ ಸಾಯಿಸಿದ ಹಾವನ್ನು ಹಿಡಿದುಕೊಂಡು ಬಂದಿರುವೆ. ಇದನ್ನೇನು ಮಾಡಲಿ ಹೇಳಿ? ನೀವು ಅಪ್ಪಣೆ ಕೊಟ್ಟರೆ ಈಗಲೇ ಈ ಹಾವನ್ನು ಕತ್ತರಿಸಿ ತುಂಡು ತುಂಡು ಮಾಡಿ ಚೆಲ್ಲುತ್ತೇನೆ. ಇಲ್ಲವೇ ಇದನ್ನು ಕೂಡಲೇ ಬೆಂಕಿಯಲ್ಲಿ ಹಾಕಿ ಸುಟ್ಟುಬಿಡುತ್ತೇನೆ. ನಿಮ್ಮ ಅಪ್ಪಣೆಗಾಗಿ ಕಾದುಕೊಂಡಿದ್ದೇನೆ. ಹೇಳಿ ತಾಯಿ" ಎಂದು ಆ ತಾಯಿಯಲ್ಲಿ ಅಲವತ್ತುಕೊಳ್ಳುತ್ತಾನೆ.

ಕರುಣಾಮಯಿಯಾದ ಆ ತಾಯಿ ಹೇಳುತ್ತಾಳೆ, "ಬೇಡಪ್ಪಾ ಬೇಡ. ಈ ಹಾವಿಗೆ ಏನನ್ನೂ ಮಾಡಬೇಡ. ಇದನ್ನು ಹಾಗೆಯೇ ಬಿಟ್ಟುಬಿಡು. ಈ ಹಾವನ್ನು ಕೊಲ್ಲುವುದರಿಂದ ನನಗೆ ನನ್ನ ಮಗ ಮತ್ತೆ ದೊರಕುತ್ತಾನೆಯೇ? ಆತನ ಜೀವ ಮರಳಿಬರುವುದೇನು? ಇಲ್ಲ.. ಹೋದ ಜೀವ ಹೋಯಿತು! ವಿನಾಕಾರಣ ಈ ಹಾವನ್ನು ಸಾಯಿಸಿ ಏನು ಮಾಡುವುದು? ಈ ಹಾವನ್ನು ಕೊಂದು ನೀನೇಕೆ ವೃಥಾ ಪಾಪಭಾಜನನಾಗುವೆ? ಹಾವನ್ನು ಬಿಟ್ಟುಬಿಡು" ಎನ್ನುತ್ತಾಳೆ.

ವ್ಯಾಧ ಅರ್ಜುನಕ ಹೇಳುತ್ತಾನೆ, "ತಾಯಿ! ನೀವು ಸ್ವಾಭಾವಿಕವಾಗಿಯೇ ಕರುಣಾಮಯಿ ಆಗಿರುವುದರಿಂದ ಹೀಗೆ ಹೇಳುತ್ತಿರುವಿರಿ. ಈ ಹಾವು ತಪ್ಪು ಮಾಡಿದೆ. ಈ ಹಾವಿಗೆ ಶಿಕ್ಷೆ ಆಗಲೇಬೇಕು. ಇದನ್ನು ಸಾಯಿಸಲೇಬೇಕು. ನೀವು ಹೂಂ ಅಂದುಬಿಡಿ ಸಾಕು. ನಾನು ಇದನ್ನು ಸಾಯಿಸಿಬಿಡುತ್ತೇನೆ" ಎಂದನು. ಆ ವ್ಯಾಧ ಹಾವನ್ನು ಕೊಲ್ಲುವುದಾಗಿ ಮತ್ತೆ ಮತ್ತೆ ಹೇಳಿದರೂ ಆ ತಾಯಿ ಹಾವನ್ನು ಸಾಯಿಸುವುದಕ್ಕೆ ಒಪ್ಪುವುದಿಲ್ಲ. ವ್ಯಾಧನ ಆಗ್ರಹಕ್ಕೆ ಪೂರಕವಾದ ಪ್ರತಿಕ್ರಿಯೆ ದೊರಕಲಿಲ್ಲ.

ಅಷ್ಟರಲ್ಲಿ ವ್ಯಾಧ ಮತ್ತು ಆ ಮಾತೆಯ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಹಾವು ಮನುಷ್ಯ ಧ್ವನಿಯಲ್ಲಿ ಮಾತನಾಡತೊಡಗಿತು. ಹಾವು ಹೇಳಿತು, "ಅಯ್ಯಾ ಅರ್ಜುನಕ, ಈ ತಾಯಿಯ ಮಗುವನ್ನು ಸಾಯಿಸುವಲ್ಲಿ ನನ್ನ ತಪ್ಪೇನಿಲ್ಲ. ನಾನು ಮೃತ್ಯುವಿನಿಂದ ಪ್ರೇರಿತನಾಗಿ ಮಗುವನ್ನು ಕಚ್ಚಿದ್ದೇನೆ. ಆ ಪುಟ್ಟ ಮಗುವಿನ ವಿಷಯದಲ್ಲಿ ನನಗೇನು ದ್ವೇಷವಿತ್ತು? ನಾನೇಕೆ ಮಗುವನ್ನು ಸಾಯಿಸಲಿ? ನೀನು ವೃಥಾ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿರುವೆ. ಇದು ತಪ್ಪು! ನಾನು ಮೃತ್ಯುಪ್ರೇರಿತ ಅಷ್ಟೇ. ನೀನು ದಂಡಿಸುವುದಾದರೆ ಮೃತ್ಯುವನ್ನು ದಂಡಿಸು. ನಾನು ಈ ಮಗುವನ್ನು ಸಾಯಿಸುವಲ್ಲಿ ಒಂದು ಸಾಧನವಾಗಿ ಬಳಕೆಯಾಗಿದ್ದೇನೆ ಅಷ್ಟೇ. ಇದರಲ್ಲಿ ಕೈ ಮಾತ್ರ ನನ್ನದು. ಕೈವಾಡ ಇನ್ನೊಬ್ಬರದು.

ಅಪರಾಧ ಮಾಡಿದವನಿಗಿಂತ ಅಪರಾಧ ಮಾಡಲು ಪ್ರೇರೇಪಿಸಿದವನನ್ನು ಹೆಚ್ಚು ಕಠಿಣವಾಗಿ ದಂಡಿಸುವುದುಂಟು. ವೃಥಾ ನಿನ್ನ ಕೋಪತಾಪವನ್ನು ನನ್ನ ಮೇಲೆ ಹೇರುವುದಕ್ಕೆ ಬರಬೇಡ" ಎಂದಿತು.

ಅದುವರೆಗೆ ಅದೃಶ್ಯನಾಗಿದ್ದ ಮೃತ್ಯುದೇವತೆ ಹಾವಿನ ಮಾತನ್ನು ಕೇಳಿಸಿಕೊಂಡು ಅಲ್ಲಿ ಸಶರೀರವಾಗಿ ಪ್ರಕಟವಾಗುತ್ತಾನೆ. "ಎಲೈ ಹಾವೇ ನೀನು ನನ್ನತ್ತ ಏಕೆ ಬೆರಳು ಮಾಡುತ್ತಿರುವೆ? ನೀನು ನನ್ನನ್ನೇಕೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿರುವೆ? ಇದರಲ್ಲಿ ನನ್ನದೇನೂ ತಪ್ಪಿಲ್ಲ. ನಾನು ಕಾಲನ ವಶವರ್ತಿ. ಆತ ಹೇಳಿದಂತೆ ನಾನು ಮಾಡುತ್ತೇನೆ. ನಾನು ಮಾತ್ರ ಅಲ್ಲ, ಈ ಜಗತ್ತೆಲ್ಲವೂ ಕಾಲನ ವಶವರ್ತಿ. ನಾವೆಲ್ಲ ಕಾಲನ ಅನುಜ್ಞೆಯಂತೆ ನಡೆದುಕೊಂಡಿರುತ್ತೇವೆ. ನಾವೆಲ್ಲ ಕಾಲಕ್ಕೆ ತಕ್ಕಂತೆ ಕುಣಿದುಕೊಂಡಿರುತ್ತೇವೆ. ಇದರಲ್ಲಿ ನಮ್ಮದೇನೂ ತಪ್ಪಿಲ್ಲ. ಈ ಜಗತ್ತೆಲ್ಲವೂ ಕಾಲಪುರುಷನ ನಿಯಂತ್ರಣದಲ್ಲಿದೆ. ನಾವೆಲ್ಲ ಕಾಲನ ಕೈಯಲ್ಲಿರುವ ಕೈಗೊಂಬೆಗಳು ಅಷ್ಟೇ. ಕಾಲನೇ ಸೂತ್ರಧಾರ" ಎಂದು ಮೃತ್ಯುದೇವತೆ ಕಾಲನತ್ತ ಬೆರಳು ಮಾಡುತ್ತದೆ.

ಆ ಕ್ಷಣಕ್ಕೆ ಅಲ್ಲಿಗೆ ಕಾಲಪುರುಷನೂ ಕೂಡ ಸಶರೀರಿಯಾಗಿ ಆಗಮಿಸುತ್ತಾನೆ. ಆತ ಹೇಳುತ್ತಾನೆ, "ಏನಪ್ಪಾ ಇದೇನು? ನೀವೆಲ್ಲ ಸೇರಿ ನನ್ನನ್ನೇಕೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿರುವಿರಿ? ಇದರಲ್ಲಿ ನನ್ನ ತಪ್ಪೇನಿಲ್ಲ. ಮಗುವಿನ ಸಾವಿಗೆ ಸರ್ಪವೂ ಕಾರಣವಲ್ಲ, ಮೃತ್ಯುದೇವತೆಯೂ ದೋಷಿಯಲ್ಲ, ಕಾಲನಾದ ನಾನೂ ಕಾರಣನಲ್ಲ. ಅಪರಾಧಿಗಳ ಸ್ಥಾನದಲ್ಲಿ ನಿಂತುಕೊಂಡಿರುವ ನಾವೆಲ್ಲ ನಿರಪರಾಧಿಗಳು. ಇದರಲ್ಲಿ ನಮ್ಮ ನಿಮ್ಮಗಳ ಕೈ ಇಲ್ಲ ಕೈವಾಡವೂ ಇಲ್ಲ" ಎಂದನು.

ಮತ್ತೆ ಮುಂದುವರಿದು ಮಾತನಾಡುತ್ತ, "ಇದಕ್ಕೆಲ್ಲ ಜೀವಿಗಳ ಕರ್ಮ ಕಾರಣ. ಈ ಪ್ರಪಂಚದಲ್ಲಿ ಪ್ರತಿಯೊಂದು ಜೀವಿಯೂ ತನ್ನ ತನ್ನ ಕರ್ಮಕ್ಕನುಗುಣವಾಗಿ ಫಲವನ್ನು ಪಡೆದುಕೊಳ್ಳುತ್ತದೆ. ಈ ಜಗತ್ತಿನಲ್ಲಿ ಪ್ರತಿಯೊಂದು ಜೀವಿಯೂ ತನ್ನ ಕರ್ಮಕ್ಕನುಗುಣವಾಗಿ ಹುಟ್ಟುತ್ತದೆ ಮತ್ತು ತನ್ನ ಕರ್ಮಕ್ಕನುಗುಣವಾಗಿಯೇ ಸಾಯುತ್ತದೆ. ಪ್ರತಿಯೊಂದು ಜೀವಿಯೂ ಈ ಪ್ರಪಂಚದಲ್ಲಿ ತನ್ನ ಕರ್ಮಕ್ಕನುಸಾರವಾಗಿ ಸುಖ-ದುಃಖಗಳನ್ನು ಅನುಭವಿಸಿಕೊಂಡಿರುತ್ತದೆ. ಅದರ ಕರ್ಮವನ್ನು ಅದು ಅನುಭವಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಇಲ್ಲಿ ಯಾರದೂ ಕೂಡ ಏನೂ ನಡೆಯುವುದಿಲ್ಲ. ದೇವರೂ ಕೂಡ ಈ ವಿಷಯದಲ್ಲಿ ತಟಸ್ಥ ನೀತಿಯನ್ನು ಅನುಸರಿಸಿಕೊಂಡಿರುತ್ತಾನೆ. ನಮ್ಮ ಕರ್ಮಪಾಕದ ವಿಷಯದಲ್ಲಿ ಆತ ಏನನ್ನೂ ಮಾಡಲಾರ. ಅಷ್ಟರಿಂದಲೇ ಜ್ಞಾನಿಗಳು, 'ನಾ ಮಾಡಿದ ಕರ್ಮ ಬಲವಂತವಾದೊಡೆ ನೀ ಮಾಡುವುದೇನಿದೆ ಶ್ರೀಹರಿ' ಎಂದು ತಮ್ಮನ್ನೇ ತಾವು ಸಮಾಧಾನಿಸಿಕೊಂಡುದು ಉಂಟು. 'ಕರ್ಮಣಾ ಗಹನಾ ಗತೀ' ಎಂದು ಋಷಿಗಳು ಹೇಳಿಲ್ಲವೇ?

ಬಾಲಕನು ತಾನು ಮಾಡಿದ ಕರ್ಮಕ್ಕನುಗುಣವಾಗಿ ಅಕಾಲದಲ್ಲಿ ಮೃತನಾಗಿದ್ದಾನೆ. ಚಿಕ್ಕ ವಯಸ್ಸಿನಲ್ಲಿಯೇ ಈತ ಸಾಯುವುದಕ್ಕೆ ಈತನ ಕರ್ಮ ಕಾರಣ. ನೀವಾರೂ ಸಹ ನಿಮ್ಮನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿಕೊಂಡು ಕೊರಗುವ, ಮರುಗುವ ಅವಶ್ಯಕತೆ ಇಲ್ಲ" ಎಂದು ಹೇಳುತ್ತ ಕಾಲಪುರುಷ ತನ್ನ ಮಾತಿಗೆ ತೆರೆ ಎಳೆಯುತ್ತಾನೆ.

ಇವರೆಲ್ಲರ ಮಾತುಗಳನ್ನು ಗಮನವಿಟ್ಟು ಆಲಿಸಿದ ಮಹಿಳೆಯ ದುಃಖತಪ್ತ ಮನಸ್ಸು ತುಸು ನಿರಾಳವಾಗುತ್ತದೆ. ವ್ಯಾಧ ಹಾವನ್ನು ಅದರ ಪಾಡಿಗೆ ಅದು ಹರಿದುಹೋಗಲು ಅವಕಾಶ ಮಾಡಿಕೊಟ್ಟು ಅಲ್ಲಿಂದ ಹೊರಟುಹೋಗುತ್ತಾನೆ.


ನಮ್ಮ ಸುಖ-ದುಃಖಗಳು ನಮ್ಮ ಕರ್ಮಕ್ಕನುಗುಣವಾಗಿ ನಮಗೆ ದೊರೆತಿವೆ. ಅರಿಯದೆ ನಾವು ಮಾಡುವ ಪಾಪಕರ್ಮಕಳೆಷ್ಟೋ? ಆದರೆ ಅರಿವಿನಿಂದ ಸಾಧ್ಯವಾದಷ್ಟು ಸಮಾಜಕ್ಕೆ ಒಳಿತಾಗುವ ಕಾರ್ಯಗಳನ್ನು ಮಾಡೋಣ. ಸುಕರ್ಮಗಳನ್ನು ಮಾಡುವ ಮೂಲಕ ಪ್ರಕೃತಿಯಲ್ಲಿ ಹೊಸತನ ಅವಿರ್ಭವಿಸುವಂತೆ ನಮ್ಮಲ್ಲೂ ವ್ಯಕ್ತಿತ್ವದಲ್ಲೂ ಹೊಸತನವನ್ನು, ನವೋತ್ಸಾಹವನ್ನು ತುಂಬಿಕೊಳ್ಳೋಣ. ನಮ್ಮ ಆತ್ಮಾವಲೋಕನದಿಂದ ದೋಷಗಳನ್ನು ತಿದ್ದಿಕೊಳ್ಳುವುದರಿಂದ ಜೀವನ ಆನಂದಮಯವಾಗುತ್ತದೆ. ॐ

**ಪ್ರಕೃತಿ-ವಿಕೃತಿ-ಸಂಸ್ಕೃತಿ**

ಪ್ರೀತಿ ಪ್ರಕೃತಿ, ದ್ವೇಷ ವಿಕೃತಿ,
ಪವಿತ್ರ ಪ್ರೇಮ ಸಂಸ್ಕೃತಿ

# ಮಾವು





ಜುಲೈ 22 ರಂದು ರಾಷ್ಟ್ರೀಯ ಮಾವು ದಿನವಾಗಿ ಆಚರಿಸಲಾಗುತ್ತಿದೆ. ಈಗ ಮಾವಿನ ಋತುವೂ ಹೌದು. ನಮ್ಮ ಆರೋಗ್ಯ ಮತ್ತು ಬಾಯಿರುಚಿಗೆ ರಸಗವಳವಾಗಿರುವ ಮಾವಿನ ಹಣ್ಣಿಗೆ ಗೌರವ ಸೂಚಿಸಲು ನ್ಯಾಷನಲ್ ಮ್ಯಾಂಗೋ ಡೇ ಆಚರಣೆ ಮಾಡಲಾಗುತ್ತದೆ.

ಮಾವು ಉತ್ತರ ಆಮ್ರಾ (ಮ್ಯಾಂಗಿಫೆರ ಇಂಡಿಕ) ಉಷ್ಣವಲಯದಲ್ಲಿ ಪ್ರಪಂಚದೆಲ್ಲೆಡೆ ವ್ಯಾಪಕವಾಗಿ ಕಂಡು ಬರುವ ಮರ. ಇದರ ದಾರುವಿಗಿಂತ ಹಣ್ಣೇ ಪ್ರಸಿದ್ಧ. ಇದರ '30'ಕ್ಕಿಂತಲೂ ಹೆಚ್ಚು ತಳಿಗಳು ಪ್ರಚಲಿತವಾಗಿವೆ. ಇದು ಸುಮಾರು 4000 ವರ್ಷಗಳಿಂದಲೂ ಭಾರತದ ವ್ಯವಸಾಯದಲ್ಲಿದ್ದು, ಸುಮಾರು 17 ಮತ್ತು 18ನೇ ಶತಮಾನದಲ್ಲಿ ಯುರೋಪ್‌ನ ಪ್ರವಾಸಿಗರು ಇದನ್ನು ಪಶ್ಚಿಮದ ಉಷ್ಣವಲಯ ದೇಶಗಳಲ್ಲಿ ಪ್ರಸರಿಸಿದರು.

**ಸಸ್ಯಶಾಸ್ತ್ರೀಯ ವರ್ಗೀಕರಣ**

ಮಾವು ಗೋಡಂಬಿ, ಕರಿಗೇರು, ಅಮಟೆ ಮುಂತಾದ ಉಪಯುಕ್ತ ಸಸ್ಯಗಳನ್ನು ಒಳಗೊಂಡಿರುವ ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ್ದು, ಇದರ ಸಸ್ಯಕುಲ ಮ್ಯಾಂಗಿಫೆರಾ ಆಗಿರುತ್ತದೆ. ಭಾರತದಲ್ಲಿ ವ್ಯಾಪಕವಾಗಿರುವ ತಳಿಯ ಸಸ್ಯನಾಮ ಮ್ಯಾಂಗಿಫೆರ ಇಂಡಿಕ ಆಗಿದೆ.

**ಇತಿಹಾಸ**

ಸುಮಾರು 4000 ವರ್ಷಗಳಿಂದಲೂ ಭಾರತದಲ್ಲಿ ಮಾವಿನ ಬೇಸಾಯ ಇದೆ ಎನ್ನಲಾಗಿದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ಮಾವು ಅಸ್ಸಾಮ್-ಬರ್ಮ-ಥಾಯ್ಲೆಂಡ್ ವಲಯದಲ್ಲಿ ಉಗಮಿಸಿತು. ಈ ದೇಶಗಳ ಕಾಡುಗಳಲ್ಲಿ ಇಂದು ಜನಪ್ರಿಯವಾಗಿರುವ ಇಂಡಿಕ ಪ್ರಭೇದದ ಹಾಗೂ ಸಿಲ್ವೇಟಿಕ ಪ್ರಭೇದದ ಕಾಡು ಪ್ರರೂಪಗಳು ಕಾಣದೊರೆಯುತ್ತಿದ್ದು ಮಾವು ಇವೆರಡು ಪ್ರಭೇದಗಳ ನಡುವೆ ಸಂಭವಿಸಿತೆನ್ನಲಾದ ಸಹಜ ಸಂಕರದಿಂದ ಹುಟ್ಟಿದ್ದು ಎಂಬ ಅಭಿಪ್ರಾಯ ಇದೆ.

ಭಾರತಾದ್ಯಂತ, ಉಷ್ಣ ಹಾಗೂ ಉಪೋಷ್ಣ ವಲಯ ಬೆಟ್ಟಗಳ ಕಾಡುಗಳಲ್ಲಿ ಪ್ರಧಾನವಾಗಿ ಹಳ್ಳ ತೊರೆಗಳ ಸನಿಹದಲ್ಲಿ ಮಾವು ಕಾಡುಮರವಾಗಿ ಕಾಣದೊರೆಯುತ್ತದೆ. ಹಿಮಾಲಯ ಪರ್ವತ ಶ್ರೇಣಿಯ ತಪ್ಪಲು, ಪಶ್ಚಿಮ ಹಾಗೂ ಪೂರ್ವ ಘಟ್ಟಗಳು, ಮಧ್ಯಪ್ರದೇಶ, ಬಿಹಾರ, ಒರಿಸ್ಸ, ಅಸ್ಸಾಮ್ ಮತ್ತು ಅಂಡಮಾನ್ ದ್ವೀಪಗಳ ಕಾಡುಗಳಲ್ಲೂ ಇದು ಸಾಮಾನ್ಯ. ಅಲ್ಲದೆ ಮಾವಿನ ಮರವನ್ನು ತೋಪುಗಳಲ್ಲೂ ಮನೆಯ ಹಿತ್ತಲಿನಲ್ಲೂ, ಕೃಷಿ ಜಮೀನಿನ ಅಂಚುಗಳಲ್ಲೂ, ರಸ್ತೆಯ ಬದಿಗಳಲ್ಲೂ ಬೆಳೆಸುವ ಪ್ರತೀತಿ ಇದೆ.

ಹಣ್ಣು ಕೊಡುವ ಸಸ್ಯಗಳ ಬೇಸಾಯದ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ 60ರಷ್ಟು ಭಾಗ ಮಾವಿನ ಕೃಷಿಗೆ ವಿನಿಯೋಗವಾಗಿದೆ. (ಒಟ್ಟು 2 ದಶಲಕ್ಷ ಎಕರೆ) ಇವುಗಳ ಪೈಕಿ ಉತ್ತರ ಪ್ರದೇಶ ಮೊದಲನೆಯದು (767,690 ಎಕರೆ). ಎರಡನೆಯ ಸ್ಥಾನ ಬಿಹಾರ ರಾಜ್ಯದ್ದು (217,517 ಎಕರೆ). ಮಾವಿನ ತೋಟಗಾರಿಕೆಗೆ ಹೆಸರಾಂತ ಉಳಿದ ರಾಜ್ಯಗಳೆಂದರೆ ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಹಾಗೂ ಒರಿಸ್ಸ. ಕರ್ನಾಟಕವೂ ಕೂಡ ಸಾಕಷ್ಟು ಪ್ರಸಿದ್ಧವಾಗಿದೆ.

**ಸಮೃದ್ಧಿ ಸುಜ್ಞಾನ**

ನಾವು ನಿದ್ದೆಗೆಟ್ಟು ಕೆಲಸ ಮಾಡಿದರೆ ಮಾತ್ರ
ಇನ್ನೊಬ್ಬರ ನಿದ್ದೆ ಕೆಡಿಸುವ ಸಾಧನೆ ಮಾಡಲು ಸಾಧ್ಯ

ಪ್ರಪಂಚದ ಇನ್ನಿತರ ದೇಶಗಳಲ್ಲೂ ಮಾವಿನ ಬೇಸಾಯ ಉಂಟು. ದಕ್ಷಿಣ ಚೀನ, ಮಲಯ, ಫಿಲಿಪೀನ್ಸ್, ಹವಾಯಿ, ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾದ ಉಷ್ಣಪ್ರದೇಶಗಳು, ಮಡಗಾಸ್ಕರ್, ಆಫ್ರಿಕದ ಕರಾವಳಿ, ಉತ್ತರ ಅಮೆರಿಕದ ಫ್ಲಾರಿಡ ಮತ್ತು ಕ್ಯಾಲಿಫೋರ್ನಿಯ ರಾಜ್ಯಗಳಲ್ಲಿ ಮಾವನ್ನು ಕೃಷಿ ಮಾಡಲಾಗುತ್ತಿದೆ.

**ಸಸ್ಯ/ಗುಣ/ಲಕ್ಷಣಗಳು**

ಮಾವು 10–45 ಮೀ ಎತ್ತರಕ್ಕೆ ಬೆಳೆಯುವ ದೊಡ್ಡ ಗಾತ್ರದ ನಿತ್ಯಹರಿದ್ವರ್ಣ ಮರ. ಸಾಮಾನ್ಯವಾಗಿ ನೇರವಾಗಿ ದೃಢವಾಗಿ ಬೆಳೆಯುವಂಥ ಪ್ರಧಾನ ಕಾಂಡ, ಗುಮ್ಮಟದಾಕಾರದ ಚೆಲುವಾದ ಹಂದರ ಇದರ ಮುಖ್ಯ ಲಕ್ಷಣಗಳು. ಕಾಂಡ ಒರಟಾದ, ಮಂದವಾದ, ಕಡುಬೂದಿ ಬಣ್ಣದ ತೊಗಟೆಯಿಂದ ಆವೃತವಾಗಿದೆ. ಹಚ್ಚ ಹಸಿರಿನ ದಟ್ಟವಾದ ಎಲೆಗಳು ಇದ್ದು, ಇದು ತೇವಾಂಶವಿರುವ ಮಿಶ್ರಪರ್ಣಪಾತಿ (Mixed Deciduous) ಹಾಗೂ ಅರೆ ನಿತ್ಯಹರಿದ್ವರ್ಣ (Semi evergreen) ಕಾಡುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಎಲೆಗಳು 10–30 ಸೆಂಮೀ ಉದ್ದ, 2–9 ಸೆಂಮೀ ಅಗಲ ಇರುವಂಥ ಈಟಿ ಮೊನೆಯಾಕಾರವಾಗಿವೆ. ಇಂತಹ ಕಾಡುಗಳಲ್ಲಿ ಬೆಳೆಯುವ ಮಾವು ಎತ್ತರವಾಗಿ ಸುಮಾರು 60 ಅಡಿಗಳವರೆಗೂ ಬೆಳೆಯುತ್ತದೆ. ಇದರ ದಾರುವು ಮೃದುವಾಗಿದ್ದು ಮರಗೆಲಸಕ್ಕೆ ಸುಲಭವಾಗಿರುತ್ತದೆಯಾದರೂ ಬಾಳಿಕೆಯುತವಲ್ಲ. ಇದನ್ನು ಪದರ ಹಲಗೆ (plywood) ತಯಾರಿಕೆಯಲ್ಲಿ, ಕೆಲವು ತಾತ್ಕಾಲಿಕ ಉಪಯೋಗದ ಕೆಲಸಗಳಿಗೆ ಹಲಗೆಗಳಾಗಿ ಉಪಯೋಗಿಸಬಹುದು. ಕಸಿ ಮಾಡಲ್ಪಟ್ಟ ಅನೇಕ ತಳಿಗಳು ಕೇವಲ ರುಚಿಕರ ಹಣ್ಣಿಗಾಗಿ ಬೆಳೆಸಲ್ಪಡುತ್ತವೆ.

ಎಲೆಗಳನ್ನು ಹೊಸಕಿದರೆ ವಿಶಿಷ್ಟವಾದ ವಾಸನೆ ಹೊರಬರುತ್ತದೆ. ಹೂಗಳು ಚಿಕ್ಕಗಾತ್ರದವು; ಸಹಸ್ರ ಸಂಖ್ಯೆಯಲ್ಲಿ ಪ್ಯಾನಿಕಲ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೇ ಮರದಲ್ಲಿ ಗಂಡು ಮತ್ತು ದ್ವಿಲಿಂಗಿ ಹೂಗಳೆರಡೂ ಇರುವುವು. ಕಾಯಿ ಅಷ್ಟಿ ಫಲ (ಡ್ರೂಪ್) ಮಾದರಿಯದು. ಮಾವಿನ ವಿಭಿನ್ನ ಬಗೆಗಳಲ್ಲಿ ಕಾಯಿಯ ಗಾತ್ರ ಮತ್ತು ಆಕಾರಗಳು ಬೇರೆ ಬೇರೆಯಾಗಿರುವುವು. ಕಾಯಿಯ ಸಿಪ್ಪೆ ಮಂದ ಇಲ್ಲವೆ ತೆಳು ಚರ್ಮಿಲವಾಗಿದೆ. ಕಾಯಿ ಎಳೆಯದಿರುವಾಗ ಹಸಿರಾಗಿದ್ದು ಬಲಿತು ಮಾಗಿದಂತೆ ಹಳದಿ ಅಥವಾ ಕೆಂಪು ಬಣ್ಣವನ್ನು ತಳೆಯುತ್ತದೆ. ಸಿಪ್ಪೆಯಲ್ಲಿ ಗ್ರಂಥಿಗಳುಂಟು. ತಿರುಳು ತಿಳಿಹಳದಿ, ಹಳದಿ, ಕಿತ್ತಳೆ ಮುಂತಾದ ವಿಭಿನ್ನ ವರ್ಣದ್ದಾಗಿದ್ದು ಗಟ್ಟಿಯಾಗಿರಬಹುದು ಅಥವಾ ಮೃದು ಹಾಗೂ ರಸಭರಿತವಾಗಿರಬಹುದು. ಕೆಲವು ಬಗೆಗಳಲ್ಲಿ ಇದಕ್ಕೆ ಹುಳಿ ರುಚಿಯಿದ್ದರೆ ಇನ್ನು ಕೆಲವುಗಳಲ್ಲಿ ಸಿಹಿಯಾಗಿ ಮಾಧುರ್ಯದಿಂದ ಕೂಡಿರುತ್ತದೆ. ಅಂತೆಯೇ ಕೆಲವು ತೆರನ ಮಾವುಗಳು ನಾರು ನಾರಾಗಿರುವುದೂ ಉಂಟು. ಒಳಗೆ ಒಂದೇ ಒಂದು ಅಂಡಾಕಾರದ ಬೀಜ ಇದೆ. ಇದರ ಸುತ್ತ ಪೆಡಸಾದ, ನಾರಿನಿಂದ ರಚಿತವಾದ ಕವಚ ಉಂಟು; ಇದೇ ಓಟೆ.

**ಬೇಸಾಯ**

ಮಾವು ಪ್ರಧಾನವಾಗಿ ಉಷ್ಣವಲಯದ ಬೆಳೆ. ವರ್ಷದಲ್ಲಿ ಜೂನ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಮಾತ್ರ ಸು. 75–250 ಸೆಂಮೀ ಮಳೆ ಬೀಳುವಂಥ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಹೂ ಅರಳುವ ಸಮಯದಲ್ಲಿ ಮಳೆಗಾಳಿ, ಮಂಜು, ಮೋಡ ಮುಸುಕಿದ ವಾತಾವರಣ ಇರಬಾರದು. ಹಣ್ಣುಗಳು ಬಲಿತು ಮಾಗುವ ವೇಳೆಯಲ್ಲೂ ಮಳೆ ಬೀಳಬಾರದು. ಮಾವು ಕಡುಚಳಿಯನ್ನು ಸಹಿಸದು. ಆಳವಾದ ಮತ್ತು ನೀರು ಚೆನ್ನಾಗಿ ಬಸಿದು ಹೋಗುವಂಥ ಮಣ್ಣು ಇದರ ಬೆಳವಣಿಗೆಗೆ ಉತ್ತಮ, ಮೆಕ್ಕಲು ಮಣ್ಣು ಅತ್ಯುತ್ತಮ. ನೆಲ ಕ್ಷಾರೀಯವಾಗಿಯಾಗಲಿ ಅಥವಾ ಶಿಲಾಮಯವಾಗಿಯಾಗಲಿ ಇರಬಾರದು.

ಮಾವನ್ನು ಬೀಜಗಳ ಮುಖಾಂತರ ಸುಲಭವಾಗಿ ಬೆಳೆಸಬಹುದಾದರೂ ಹೀಗೆ ಬೆಳೆಸಲಾದ ಮರಗಳು ಏಕರೀತಿಯ ಗುಣಮಟ್ಟದ ಫಲ ಕೊಡುವುದು ಖಚಿತವಲ್ಲವಾದ್ದರಿಂದ, ಕಸಿಮಾಡಿ ಬೆಳೆಸುವುದೇ ವಾಡಿಕೆ.

ಕಸಿಮಾಡಿದ ಮಾವಿನ ಸಸಿಗಳನ್ನು ಜುಲೈ–ಡಿಸೆಂಬರ್ ತಿಂಗಳುಗಳ ಅವಧಿಯಲ್ಲಿ ಬೇಕೆನಿಸಿದ ಕಡೆ 60–90 ಸೆಂ.ಮೀ ಆಳದ ಗುಂಡಿಗಳನ್ನು ತೋಡಿ ಕೊಟ್ಟಿಗೆ ಗೊಬ್ಬರ, ಬೂದಿ, ಮಣ್ಣು ಇವುಗಳ ಮಿಶ್ರಣವನ್ನು ಹಾಕಿ, ನೆಡಲಾಗುತ್ತದೆ. ಸಸಿಗಳ ನಡುವಣ ಅಂತರ ಅವುಗಳ ಬೆಳವಣಿಗೆಯ ತೀವ್ರತೆ, ಸ್ವಭಾವವನ್ನನುಸರಿಸಿ 10.5 ರಿಂದ 18 ಮೀಟರಿನವರೆಗೆ ವ್ಯತ್ಯಾಸವಿರಬೇಕು.

ಸಸಿ ನೆಟ್ಟ ಮೊದಲ 3–4 ವರ್ಷಗಳ ಕಾಲ ಗಿಡಗಳಿಗೆ ನೀರು ಹಾಯಿಸುವುದು ಕ್ರಮ. ಆನಂತರ ಮಳೆ ಸರಿಯಾಗಿದ್ದರೆ ನೀರು ಹಾಕುವುದು ಅನಗತ್ಯ. ಅಂತೆಯೇ ಗಿಡಗಳು ಸಣ್ಣ ವಯಸ್ಸಿನವಾಗಿರುವಾಗ ಕೊಟ್ಟಿಗೆ ಗೊಬ್ಬರ, ಮೂಳೆ ಗೊಬ್ಬರ, ಬೂದಿ, ಹರಳು ಹಿಂಡಿ, ಅಮೋನಿಯಮ್ ಸಲ್ಫೇಟ್ ಮುಂತಾದವುಗಳ ಮಿಶ್ರಣವನ್ನು ಹಾಕಲಾಗುತ್ತದೆ. ಮರ ದೊಡ್ಡದಾದ ಮೇಲೆ ಗೊಬ್ಬರ ಹಾಕುವ ಕ್ರಮ ಇಲ್ಲ.

ಕಡುಚಳಿಯಿಂದಲೂ ಬೇಸಗೆಯಲ್ಲಿ ಬಿಸಿಗಾಳಿಯಿಂದಲೂ ಮರಗಳಿಗೆ ಹಾನಿಯುಂಟಾಗುವುದರಿಂದ ಇದನ್ನು ತಡೆಯಲು ಮಾವಿನತೋಟದ ಸುತ್ತ ಹಿಪ್ಪು ನೇರಳೆ, ಬಿರಡಿ, ಗಾಳಿಮರ, ಹಾಲವಾಣ, ರಕ್ತಚಂದನ ಮುಂತಾದ ಮರಗಳನ್ನು ಬೆಳೆಸುವುದು ಉತ್ತಮವಾಗಿದೆ.

ಮಾವಿನಮರ ವರ್ಷಕ್ಕೊಮ್ಮೆ, ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಹೂಬಿಡುತ್ತದೆ. ಚಳಿ ಹೆಚ್ಚಾಗಿರುವಂಥ ಉತ್ತರ ಭಾರತದಲ್ಲಿ ಹೂ ಅರಳುವ ಶ್ರಾಯ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಸುಮಾರು 6–8 ವಾರ ಮರದಲ್ಲಿ ಹೂ ಅರಳಿರುವುವು. ಕಾಯಿ ಕಚ್ಚಿ, ಹಣ್ಣು ಪಕ್ವಸ್ಥಿತಿಗೆ ಬರಲು ಸುಮಾರು 4–5 ತಿಂಗಳು ಕಾಲ ಹಿಡಿಯುವುದು.

ಹತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಾವಿನ ಮರಗಳು ಪ್ರತಿವರ್ಷ ಹೂ ಬಿಡುವುವಾದರೂ ವಯಸ್ಸಾದ ಮರಗಳು ವರ್ಷ ಬಿಟ್ಟು ವರ್ಷ ಹೂ ಅರಳಿಸಿ ಫಲ ಕೊಡುವುವು. ಇದಕ್ಕೆ ಕಾರಣ ಹಲವಾರು. ಹವೆ, ನೆಲದಲ್ಲಿಯ ಆರ್ದ್ರತೆ, ರೋಗ–ರುಜಿನಗಳು ಇತ್ಯಾದಿ. ಹೂಗೊಂಚಲಿನ ಎಲ್ಲ ಹೂಗಳೂ ಕಾಯಿಕಚ್ಚವು. ಕಾಯಿಯಾಗುವ ಹೂಗಳ ಸಂಖ್ಯೆ ವಿವಿಧ ಬಗೆಗಳಲ್ಲಿ ಬೇರೆ ಬೇರೆಯಾಗಿವೆ.

ಮಾವಿನಮರಕ್ಕೆ ಹಲವಾರು ರೀತಿಯ ರೋಗಗಳು, ಕೀಟ ಪಿಡುಗುಗಳು ಹಾನಿ ಎಸಗುವುದುಂಟು. ಬೂಷ್ಟು ರೋಗಗಳ ಪೈಕಿ ಪೌಡರಿ ಮಿಲ್‌ಡ್ಯೂ, ಆಂತ್ರಕ್ನೋಸ್ ಮತ್ತು ಹೂಮಂಜರಿಯ ಕುಚ್ಚುಗಟ್ಟುವಿಕೆ ಮುಖ್ಯವೆನಿಸಿವೆ. ಮೊದಲ ರೀತಿಯ ರೋಗ ಹೂ ಮತ್ತು ಕಾಯಿಗಳಿಗೆ ಅಂಟುವ ಜಾಡ್ಯ. ಗಂಧಕವನ್ನು ಸಿಂಪಡಿಸುವುದರ ಮೂಲಕ ಇದನ್ನು ತಡೆಗಟ್ಟಬಹುದು.

ಆಂತ್ರಕ್ನೋಸ್ ರೋಗದ ಲಕ್ಷಣ ಎಂದರೆ ಎಳೆಯ ಕುಡಿಗಳು, ಎಲೆ ಹಾಗೂ ಹೂಗಳ ಮೇಲೆ ಕಪ್ಪುಚುಕ್ಕೆಗಳು ಕಾಣಿಸಿಕೊಳ್ಳುವುದು. ಕಾಯಿ ಎಳೆಯವಾಗಿದ್ದರೆ ಬಿದ್ದುಹೋಗುವುವು. ಬಲಿತ ಅಥವಾ ಮಾಗಿದ ಹಣ್ಣುಗಳಾದರೆ ಸಿಪ್ಪೆಯ ಮೇಲೆ ಕಪ್ಪುಚುಕ್ಕೆಗಳು ಮೂಡುವುದಲ್ಲದೆ ಒಳಗಿನ ತಿರುಳು ಗಡುಸಾಗುತ್ತದೆ. ಬೋರ್ಡೊ ಮಿಶ್ರಣದ ಸಿಂಪಡಿಕೆಯಿಂದ ರೋಗವನ್ನು ನಿಯಂತ್ರಿಸಬಹುದು.

ಕುಚ್ಚು ರೋಗದ ಕಾರಣ ಖಚಿತವಾಗಿ ತಿಳಿದಿಲ್ಲ. ರೋಗಪೀಡಿತ ಹೂ ಮಂಜರಿಗಳನ್ನು ಕತ್ತರಿಸಿ ಸುಟ್ಟು ಹಾಕುವುದೇ ಈ ರೋಗವನ್ನು ಹತೋಟಿಯಲ್ಲಿಡುವ ಮಾರ್ಗ. ಜಾಸಿಡ್ ಜಿಗಿಕೀಟ, ಕಾಂಡ ಕೊರಕ, ಸೊಂಡಿಲು ಕೀಟ, ಶಲ್ಕ ಕೀಟ, ಮಕಮಲ್ ತಿಗಣೆ, ಕೆಂಪಿರುವೆ ಮುಂತಾದವು ಮಾವಿನಮರಕ್ಕೆ ಹಾನಿಯುಂಟು ಮಾಡುವ ಕೀಟಗಳ ಪೈಕಿ ಕೆಲವು, ಡಿಡಿಟಿ, ಬಿಎಚ್‌ಸಿ, ಫಾಲಿಡಾಲ್, ಗೆಸರೋಲ್ ಮುಂತಾದ ಕೀಟನಾಶಕಗಳ ಬಳಕೆಯಿಂದ ಕೀಟಗಳನ್ನು ನಿಯಂತ್ರಿಸಬಹುದು. ॐ

ಮುಂದುವರೆಯುವುದು.............

**ಮನೆ ಮದ್ದು :**

**ರಕ್ತ ಶುದ್ಧಿಗೆ ಪಪ್ಪಾಯ** : ಪಪ್ಪಾಯ ಹಣ್ಣು ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಈ ಹಣ್ಣಿನಲ್ಲಿ ವಿಟಮಿನ್ ಎ, ಸಿ ಗಳು ಹೆಚ್ಚಿನ ಪ್ರಮಾಣದಲ್ಲಿ ಲಭಿಸುತ್ತವೆ. ನಾರು ಪದಾರ್ಥ ಕೂಡ ಇರುತ್ತದೆ.



# ಚಂದ್ರನ ದಿನ

ಚಂದ್ರನ ದಿನ ಎಂಬ ಪದವು ಭೂಮಿಯ ಮೇಲಿನ ನಿರ್ದಿಷ್ಟ ಸ್ಥಳದಲ್ಲಿ ಚಂದ್ರೋದಯ ಅಥವಾ ಅಧಿಕ ಚಂದ್ರನ ನಡುವಿನ ಅವಧಿಯನ್ನು ಸಹ ಉಲ್ಲೇಖಿಸಬಹುದು. ಈ ಅವಧಿಯು ಸಾಮಾನ್ಯವಾಗಿ 24-ಗಂಟೆಗಳ ಭೂಮಿಯ ದಿನಕ್ಕಿಂತ ಸುಮಾರು 50 ನಿಮಿಷಗಳಷ್ಟು ದೀರ್ಘವಾಗಿರುತ್ತದೆ, ಏಕೆಂದರೆ ಭೂಮಿಯ ಅಕ್ಷೀಯ ಪರಿಭ್ರಮಣೆಯ ದಿಕ್ಕಿನಲ್ಲಿ ಚಂದ್ರನು ಭೂಮಿಯನ್ನು ಸುತ್ತುತ್ತಾನೆ.

ಇತಿಹಾಸವನ್ನು ಮೆಲುಕು ಹಾಕುವಾಗ ಜುಲೈ 20 ಅನ್ನು ಒಂದು ಪ್ರಮುಖ ದಿನವೆಂದು ಪರಿಗಣಿಸಲಾಗುತ್ತದೆ. 1969 ರಲ್ಲಿ ಮನುಷ್ಯನು ಚಂದ್ರನ ಮೇಲೆ ನಡೆದ ಮೊದಲ ಬಾರಿಗೆ ಸುಮಾರು 52 ವರ್ಷಗಳ ಹಿಂದೆ ಒಂದು ಯುಗವನ್ನು ವ್ಯಾಖ್ಯಾನಿಸಿದ ಒಂದು ಕಾರ್ಯಾಚರಣೆಯಲ್ಲಿ ಅಪೊಲೊ 11 ಮೊದಲ ಬಾರಿಗೆ ಪುರುಷರನ್ನು ಚಂದ್ರನ ಮೇಲೆ ಇಳಿಸಿತು. ಕಮಾಂಡರ್ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಚಂದ್ರನ ಮಾಡ್ಯೂಲ್ ಪೈಲಟ್‌ಗಳಾದ ಆಲ್ಡ್ರಿನ್ ಮತ್ತು ಮೈಕೆಲ್ ಕಾಲಿನ್ಸ್ ಅಪೊಲೊ 11 ಬಾಹ್ಯಾಕಾಶ ನೌಕೆಯಲ್ಲಿದ್ದರು.

1969 ರಲ್ಲಿ ಈ ದಿನ, ನೀಲ್ ಆರ್ಮ್‌ಸ್ಟ್ರಾಂಗ್ ಅವರು ಚಂದ್ರನ ಮೇಲ್ಮೈಯಲ್ಲಿ ಮೊದಲ ಹೆಜ್ಜೆಗಳನ್ನು ಇಡುತ್ತಿದ್ದಂತೆ, ಇಡೀ ಭೂಮಿಗೆ ಮೊದಲ ಮಾತುಗಳನ್ನು ಹೇಳಿದರು, "ಮನುಷ್ಯನಿಗೆ ಒಂದು ಸಣ್ಣ ಹೆಜ್ಜೆ, ಮಾನವಕುಲಕ್ಕೆ ಒಂದು ದೈತ್ಯ ಅಧಿಕ". 1971 ರಲ್ಲಿ, ಆಗಿನ ಯುಎಸ್ ಅಧ್ಯಕ್ಷ ರಿಚರ್ಡ್ ನಿಕ್ಸನ್ ಚಂದ್ರನ ಮೇಲೆ ಮನುಷ್ಯನ ಮೊದಲ ಇಳಿಯುವಿಕೆಯ ವಾರ್ಷಿಕೋತ್ಸವದ ನೆನಪಿಗಾಗಿ ರಾಷ್ಟ್ರೀಯ ಚಂದ್ರನ ದಿನವನ್ನು ಘೋಷಿಸಿದರು.

**ಇತಿಹಾಸ ಮತ್ತು ಮಹತ್ವ**

ಈ ಮಿಷನ್ ಅನ್ನು ವಿಶ್ವದಾದ್ಯಂತ ಲಕ್ಷಾಂತರ ಜನರಿಗೆ ನೇರ ಪ್ರಸಾರ ಮಾಡಲಾಯಿತು. ಈ ಮಿಷನ್ ಪೂರ್ಣಗೊಂಡ ನಂತರ, ನಾಸಾ ಲ್ಯಾಂಡಿಂಗ್ ಅನ್ನು "ಸಾರ್ವಕಾಲಿಕ ಏಕೈಕ ದೊಡ್ಡ ತಾಂತ್ರಿಕ ಸಾಧನೆ" ಎಂದು ಬಣ್ಣಿಸಿದೆ. ಆಕಾಶವು ಹೊಸ ಸಾಧ್ಯತೆಗಳು ಮತ್ತು ಪರಿಶೋಧನೆಗಳಿಗೆ ತೆರೆದುಕೊಳ್ಳುತ್ತಿದ್ದಂತೆ, ಜುಲೈ 20 ಯುನೈಟೆಡ್ ಸ್ಟೇಟ್ಸ್ ಇತಿಹಾಸದಲ್ಲಿ ಮಾತ್ರವಲ್ಲದೆ ಜಗತ್ತಿನ ಇತಿಹಾಸದಲ್ಲೂ ಅತ್ಯಂತ ಮಹತ್ವದ ದಿನಗಳಲ್ಲಿ ಒಂದಾಗಿದೆ. ಅಪೊಲೊ 1 ರ ಪರಿಣಾಮವಾಗಿ ನಾಸಾ ಹೆಚ್ಚಿನ ಕಾರ್ಯಗಳನ್ನು ಜಗತ್ತಿಗೆ ಕಳುಹಿಸುವ ಪ್ರಯತ್ನವನ್ನು ಹೆಚ್ಚಿಸಿತು.

ಇತಿಹಾಸದ ಪುಟದಲ್ಲಿ ಅದೆಷ್ಟೋ ಆಕರ್ಷಕ ಘಟನೆಗಳು ನಡೆದಿವೆ. ಅದರಲ್ಲಿ ಮನುಷ್ಯನು ಚಂದ್ರನ ಮೇಲೆ ನಡೆದಾಡಿದ ಘಟನೆಯೂ ಒಂದು. ಇಡೀ ಜಗತ್ತೇ ಬೆರಗಾಗುವಂತೆ ಮಾಡಿದ ದಿನವದು. 1969 ಜುಲೈ 20ರಂದು ನೀಲ್ ಆರ್ಮ್‌ಸ್ಟಂಗ್ ಮತ್ತು ಬುಜ್ ಅಲ್ಡ್ರಿನ್ ಅವರು ಚಂದ್ರನ ಅಂಗಳದಲ್ಲಿ ಇಳಿದ ಸುದ್ದಿಯೊಂದು ಜಗತ್ತಿನಾದ್ಯಂತ ಕೇಳಿಬಂದಿತ್ತು.

ಅಪೊಲೊ-11 ನೌಕೆಯಲ್ಲಿ ನೀಲ್ ಆರ್ಮ್‌ಸ್ಟಂಗ್ ಹಾಗೂ ಜುಜ್ ಅಲ್ಡ್ರಿನ್ ಚಂದ್ರನ ಅಂಗಳಕ್ಕೆ ಪ್ರವೇಶಿಸಲು ಹೊರಟರು. ಚಂದ್ರನ ಅಂಗಳ ತಲುಪಿದ 6 ಗಂಟೆಯ ಬಳಿಕ ನೀಲ್ ಆರ್ಮ್‌ಸ್ಟಂಗ್ ಚಂದ್ರನ ಅಂಗಳದಲ್ಲಿ ಹೆಜ್ಜೆ ಇರಿಸಿ ದಾಖಲೆ ಸೃಷ್ಟಿಸಿದರು. ಅದೇ ನೌಕೆಯಲ್ಲಿ ಸುಮಾರು 2 ಗಂಟೆಗಳ ಕಾಲ ಕಳೆದರು. ಇಬ್ಬರು ಗಗನ ಯಾತ್ರಿಗಳು 21.5 ಕೆಜಿ ಚಂದ್ರನ ವಸ್ತುಗಳನ್ನು ಸಂಗ್ರಹಿಸಿದರು.

ಮಹತ್ವ ಈ ದಿನದ ನೇರ ಪ್ರಸಾರವನ್ನು ಲಕ್ಷಾಂತರ ಜನರು ವೀಕ್ಷಿಸಿದರು. ಕಾರ್ಯಾಚರಣೆಯ ಯಶಸ್ಸಿನ ನಂತರ ನಾಸಾ, ಪ್ರಪ್ರಥಮ ಬಾರಿಗೆ ದೊಡ್ಡ ಸಾಧನೆ ಎಂದು ವಿವರಿಸಿದೆ. ಅಮೆರಿಕಾ ಇತಿಹಾಸದಲ್ಲಿಯೇ ಪ್ರಪಂಚವೇ ಬೆರಗಾಗುವಂತೆ ಮಾಡಿದ ದಿನ ಎಲ್ಲರಲ್ಲಿ ಅಚ್ಚಳಿಯದೇ ಉಳಿದಿದೆ.

ಚಂದ್ರನು ಭೂಮಿಗೆ ಹತ್ತಿರದಲ್ಲಿರುವುದರಿಂದ ಭೂಮಿಯಲ್ಲಿರುವ ಹಾಗೆ ಚಂದ್ರನ ಅಂಗಳದಲ್ಲಿಯೂ ನೀರಿರುವ ಸಾಧ್ಯತೆಗಳ ಬಗ್ಗೆ ಸಂಶೋಧನೆಗಳನ್ನು ಕೈಗೊಳ್ಳಲಾಗಿತ್ತು. ಚಂದ್ರನ ಮೇಲೆ ಮಾನವರು ವಾಸ ಮಾಡಬಹುದು, ನಮ್ಮ ವಾಸಕ್ಕೆ ಚಂದ್ರನು ನೆಲೆಯಾಗಬಹುದು ಎಂಬ ನಿರೀಕ್ಷೆಯೊಂದಿಗೆ ಸಂಶೋಧನೆಗಳು ನಡೆದವು.

1971 ರಲ್ಲಿ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ರಾಷ್ಟ್ರೀಯ ಚಂದ್ರನ ದಿನವನ್ನು ಆಚರಿಸಲು ಅನುಮತಿ ನೀಡಿದರು. ಚಂದ್ರನ ಅಂಗಳಲ್ಲಿ ಮನುಷ್ಯ ಇಳಿದು ಜಗತ್ತೇ ಬೆರಗಾಗುವಂತೆ ಮಾಡಿದ ಆ ದಿನದ ನೆನಪಿಗಾಗಿ ಪ್ರತೀವರ್ಷ ಜುಲೈ 20 ರಂದು ರಾಷ್ಟ್ರೀಯ ಚಂದ್ರನ ದಿನವನ್ನು ಆಚರಿಸಲಾಗುತ್ತದೆ.

ಚಂದ್ರಮಾ ಮನಸೋ ಜಾತಃ ಚಕ್ಷು ಸೂರ್ಯೋ ಅಜಾಯತ ಎನ್ನುತ್ತದೆ ಪುರುಷಸೂಕ್ತ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಚಂದ್ರನು ಮನೋಕಾರಕ ಎಂಬುದು ಸ್ಪಷ್ಟವಾಗುತ್ತದೆ. ಪ್ರಾಜ್ಞರೂ ಈ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಮನಸ್ಸನ್ನು ಸಮುದ್ರದ ಕಡಲು ಎಂದು ಭಾವಿಸುವುದಾದರೆ ಚಂದ್ರನ ಪ್ರಭಾವಕ್ಕೆ ಅನುಗುಣವಾಗಿ ಮನಸ್ಸು ಸಹ ಓಲಾಡಿ ಚಾಂಚಲ್ಯಕ್ಕೆ ಈಡಾಗುತ್ತದೆ.


ಜ್ಯೋತಿಷ್ಯ ಶಾಸ್ತ್ರದ ರೀತ್ಯ ನವಗ್ರಹಗಳಲ್ಲಿ ಎರಡನೆಯದೇ ಚಂದ್ರ. ಚಂದ್ರ ಸೌಮ್ಯ ಗ್ರಹ. ಕಟಕ ರಾಶಿ ಈತನ ಸ್ವಗೃಹ. ಬಣ್ಣ ಬಿಳಿ. ಧಾನ್ಯ ಅಕ್ಕಿ. ಈತನ ದೆಶೆ ಹತ್ತು ವರ್ಷಗಳು. ಮಾತೃಕಾರಕ, ಮನಃಕಾರಕನಾಗಿದ್ದಾನೆ. ಚಂದ್ರನ ಚಲನೆಯ ಆಧಾರದಲ್ಲಿ ದಿನ, ವಾರ, ವರ್ಷ ಭವಿಷ್ಯವನ್ನು ಲೆಕ್ಕ ಹಾಕಬಹುದು. ಮನೋಕಾರಕ ಚಂದ್ರನಾದ್ದರಿಂದ ಆತನ ಪ್ರಭಾವ ಮನಸ್ಸು, ವೃತ್ತಿ ಭೂಮಿಕೆಯ ಮೇಲಾಗುತ್ತದೆ.

**ಜಾತಕದಲ್ಲಿ ಚಂದ್ರನ ಫಲ :**

ಚಂದ್ರನು ಜಾತಕ ಕುಂಡಲಿಯ ಲಗ್ನದಲ್ಲಿದ್ದರೆ ಆತನಿಗೆ ತನ್ನ ಸೌಂದರ್ಯ ಹಾಗೂ ವ್ಯಕ್ತಿತ್ವದ ಬಗ್ಗೆ ವಿಶೇಷ ಗಮನವಿರುತ್ತದೆ. ನಿದ್ರಾ ಹೀನತೆಯಿಂದ ನರಳ ಬಹುದು. ಮಾರ್ಕೆಟಿಂಗ್ ಉದ್ಯೋಗ ಇವರಿಗೆ ಸೂಕ್ತವಾಗಿರುತ್ತದೆ. ಲಗ್ನದಿಂದ ಚಂದ್ರನು ಎರಡನೆಯ ಮನೆಯಲ್ಲಿದ್ದರೆ ದೊಡ್ಡ ಕುಟುಂಬದ ಸದಸ್ಯನಾಗಿರುತ್ತಾನೆ. ಮೂರನೆಯ ಮನೆಯಲ್ಲಿದ್ದರೆ ಅಕ್ಕ ಮತ್ತು ತಂಗಿಯರನ್ನು ಪಡೆದಿರುತ್ತಾನೆ. ನಾಲ್ಕನೆಯ ಮನೆಯಲ್ಲಿದ್ದರೆ ಸುಖ ಜೀವನ ನಡೆಸುತ್ತಾನೆ. ಐದನೇ ಮನೆಯಲ್ಲಿದ್ದರೆ ಹೆಣ್ಣು ಮಕ್ಕಳ ಸಂತಾನವನ್ನು ಪಡೆಯುತ್ತಾನೆ. ಆರನೆಯ ಮನೆಯಲ್ಲಿದ್ದರೆ ಶೀತ ಬಾಧೆ, ಏಳನೆಯ ಮನೆಯಲ್ಲಿ ಸಂಸಾರದಲ್ಲಿ ನೆಮ್ಮದಿ, ಎಂಟನೆಯ ಮನೆಯಲ್ಲಿ ನೀರಿನಿಂದ ಅಪಾಯ, ಒಂಬತ್ತನೆಯ ಮನೆಯಲ್ಲಿ ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ, ಹತ್ತನೆಯ ಮನೆಯಲ್ಲಿ ಜಲ ಸಂಬಂಧ ಉದ್ಯೋಗ ಹನ್ನೊಂದನೆಯ ಮನೆಯಲ್ಲಿ ದ್ರವ ಪದಾರ್ಥದಿಂದ ಲಾಭ ಹಾಗೂ ಹನ್ನೆರಡನೆ ಮನೆಯಲ್ಲಿ ಬಲಗಣ್ಣಿನ ತೊಂದರೆ ಕಾಣಿಸಿಕೊಳ್ಳಬಹುದು.

ಚಂದ್ರನ ಜತೆ ರಾಹುಗ್ರಹವಿದ್ದರೆ ಆತನಿಗೆ ಸಿಟ್ಟು ಹೆಚ್ಚಾಗಿ ಬರುತ್ತದೆ. ಚಂದ್ರನೊಂದಿಗೆ ಕೇತು ಅಥವಾ ಶನಿ ಇದ್ದರೆ ಮನೋಖಿನ್ನತೆ ಹೆಚ್ಚಾಗಿ ಕಾಡುತ್ತದೆ. ಶನಿ ಗೋಚಾರದಲ್ಲಿ ಚಂದ್ರ ಒಂದಾದಾಗ ಸಾಡೇಸಾತಿ ಫಲ ಉಂಟಾಗುತ್ತದೆ. ಆ ಸಮಯದಲ್ಲಿ ಆಂಜನೇಯನನ್ನು ಆರಾಧಿಸುವುದು ಒಳ್ಳೆಯದು. ॐ





# ಜನಸಂಖ್ಯಾ ದಿನ

ಪ್ರತಿ ವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ. ಜಾಗತಿಕ ಜನಸಂಖ್ಯೆ ಬೆಳೆದಂತೆ ಬಡತನ, ಆರ್ಥಿಕ ಕಾಳಜಿ, ಉದ್ಯೋಗದಂತಹ ಸಮಸ್ಯೆಗಳು ಹೆಚ್ಚಾಗುತ್ತಿವೆ. ಹೀಗಾಗಿ ವಿಶ್ವ ಜನಸಂಖ್ಯಾ ದಿನವು ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಮತ್ತು ವಿಶ್ವದಲ್ಲಿರುವ ಪ್ರತಿಯೊಬ್ಬರಿಗೂ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸಲು ಕಾರ್ಯನಿರ್ವಹಿಸುತ್ತದೆ

**ವಿಶ್ವ ಜನಸಂಖ್ಯೆಯ ಪ್ರವೃತ್ತಿಗಳು**

ವಿಶ್ವ ಜನಸಂಖ್ಯೆಯು 1 ಬಿಲಿಯನ್‌ಗೆ ಬೆಳೆಯಲು ನೂರಾರು ಸಾವಿರ ವರ್ಷಗಳನ್ನು ತೆಗೆದುಕೊಂಡಿತು – ನಂತರ ಕೇವಲ 200 ವರ್ಷಗಳಲ್ಲಿ ಅದು ಏಳು ಪಟ್ಟು ಬೆಳೆಯಿತು. 2011 ರಲ್ಲಿ, ಜಾಗತಿಕ ಜನಸಂಖ್ಯೆಯು 7 ಶತಕೋಟಿ ಗಡಿಯನ್ನು ತಲುಪಿತು, ಇದು 2021 ರಲ್ಲಿ ಸುಮಾರು 7.9 ಶತಕೋಟಿಯಷ್ಟಿದೆ ಮತ್ತು ಇದು 2030 ರಲ್ಲಿ ಸುಮಾರು 8.5 ಶತಕೋಟಿ, 2050 ರಲ್ಲಿ 9.7 ಶತಕೋಟಿ ಮತ್ತು 2100 ರಲ್ಲಿ 10.9 ಶತಕೋಟಿಗೆ ಬೆಳೆಯುವ ನಿರೀಕ್ಷೆಯಿದೆ.

ಈ ನಾಟಕೀಯ ಬೆಳವಣಿಗೆಯು ಬಹುಮಟ್ಟಿಗೆ ಸಂತಾನೋತ್ಪತ್ತಿ ವಯಸ್ಸಿಗೆ ಬದುಕುಳಿದಿರುವ ಜನರ ಸಂಖ್ಯೆಯಿಂದ ಪ್ರೇರೇಪಿಸಲ್ಪಟ್ಟಿದೆ ಮತ್ತು ಫಲವತ್ತತೆಯ ದರಗಳಲ್ಲಿ ಪ್ರಮುಖ ಬದಲಾವಣೆಗಳು, ಹೆಚ್ಚುತ್ತಿರುವ ನಗರೀಕರಣ ಮತ್ತು ವಲಸೆಯ ವೇಗವನ್ನು ಹೆಚ್ಚಿಸಿದೆ. ಈ ಪ್ರವೃತ್ತಿಗಳು ಮುಂದಿನ ಪೀಳಿಗೆಗೆ ದೂರಗಾಮಿ ಪರಿಣಾಮಗಳನ್ನು ಬೀರುತ್ತವೆ.

ಇತ್ತೀಚಿನ ದಿನಗಳಲ್ಲಿ ಫಲವತ್ತತೆ ದರಗಳು ಮತ್ತು  ಜೀವಿತಾವಧಿಯಲ್ಲಿ ಅಗಾಧವಾದ ಬದಲಾವಣೆಗಳನ್ನು ಕಂಡಿದೆ. 1970 ರ ದಶಕದ ಆರಂಭದಲ್ಲಿ, ಮಹಿಳೆಯರು ಸರಾಸರಿ 4.5 ಮಕ್ಕಳನ್ನು ಹೊಂದಿದ್ದರು; 2015 ರ ಹೊತ್ತಿಗೆ, ಪ್ರಪಂಚದ ಒಟ್ಟು ಫಲವತ್ತತೆ ಪ್ರತಿ ಮಹಿಳೆಗೆ 2.5 ಮಕ್ಕಳಿಗಿಂತ ಕಡಿಮೆಯಾಗಿದೆ. ಏತನ್ಮಧ್ಯೆ, ಸರಾಸರಿ ಜಾಗತಿಕ ಜೀವಿತಾವಧಿಯು  1990 ರ ದಶಕದ ಆರಂಭದಲ್ಲಿ 64.6 ವರ್ಷಗಳಿಂದ 2019 ರಲ್ಲಿ 72.6 ವರ್ಷಗಳಿಗೆ ಏರಿದೆ.

ಇದರ ಜೊತೆಗೆ, ಪ್ರಪಂಚವು ಉನ್ನತ ಮಟ್ಟದ ನಗರೀಕರಣವನ್ನು ನೋಡುತ್ತಿದೆ ವಲಸೆಯ ವೇಗವನ್ನು ಹೆಚ್ಚಿಸುತ್ತಿದೆ. 2007 ರಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಿನ ಜನರು ನಗರ ಪ್ರದೇಶಗಳಲ್ಲಿ ವಾಸಿಸುವ ಮೊದಲ ವರ್ಷವಾಗಿದೆ ಮತ್ತು 2050 ರ ವೇಳೆಗೆ ವಿಶ್ವದ ಜನಸಂಖ್ಯೆಯ 66 ಪ್ರತಿಶತದಷ್ಟು ಜನರು ನಗರಗಳಲ್ಲಿ ವಾಸಿಸುತ್ತಾರೆ.

ಈ ಮೆಗಾಟ್ರೆಂಡ್‌ಗಳು ದೂರಗಾಮಿ ಪರಿಣಾಮಗಳನ್ನು ಹೊಂದಿವೆ. ಅವು ಆರ್ಥಿಕ ಅಭಿವೃದ್ಧಿ, ಉದ್ಯೋಗ, ಆದಾಯ ಹಂಚಿಕೆ, ಬಡತನ ಮತ್ತು ಸಾಮಾಜಿಕ ರಕ್ಷಣೆಗಳ ಮೇಲೆ ಪರಿಣಾಮ ಬೀರುತ್ತವೆ. ಆರೋಗ್ಯ ರಕ್ಷಣೆ, ಶಿಕ್ಷಣ, ವಸತಿ, ನೈರ್ಮಲ್ಯ, ನೀರು, ಆಹಾರ ಮತ್ತು ಶಕ್ತಿಯ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನಗಳ ಮೇಲೆ ಅವು ಪರಿಣಾಮ ಬೀರುತ್ತವೆ. ವ್ಯಕ್ತಿಗಳ ಅಗತ್ಯಗಳನ್ನು ಹೆಚ್ಚು ಸಮರ್ಥವಾಗಿ ಪರಿಹರಿಸಲು, ನೀತಿ ನಿರೂಪಕರು ಗ್ರಹದಲ್ಲಿ ಎಷ್ಟು ಜನರು ವಾಸಿಸುತ್ತಿದ್ದಾರೆ, ಅವರು ಎಲ್ಲಿದ್ದಾರೆ, ಅವರು ಎಷ್ಟು ವಯಸ್ಸಾದವರು ಮತ್ತು ಅವರ ನಂತರ ಎಷ್ಟು ಜನರು ಬರುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.



ಪ್ರಪಂಚದಾದ್ಯಂತ ಶೇಕಡಾ 40 ಕ್ಕಿಂತ ಹೆಚ್ಚು ಮಹಿಳೆಯರು ಲೈಂಗಿಕ, ಸಂತಾನೋತ್ಪತ್ತಿ ಆರೋಗ್ಯ ಮತ್ತು ಸಂತಾನೋತ್ಪತ್ತಿ ಹಕ್ಕುಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ.

ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ನಾಲ್ಕು ಮಹಿಳೆಯರಲ್ಲಿ ಒಬ್ಬರು ತಮ್ಮ ಅಪೇಕ್ಷಿತ ಫಲವತ್ತತೆಯನ್ನು ಅರಿತುಕೊಳ್ಳುತ್ತಿದ್ದಾರೆ. ಗರ್ಭಾವಸ್ಥೆ ಅಥವಾ ಹೆರಿಗೆಯ ಕಾರಣದಿಂದಾಗಿ ಪ್ರತಿ ಎರಡು ನಿಮಿಷಗಳಿಗೊಮ್ಮೆ ಮಹಿಳೆ ಸಾಯುತ್ತಾಳೆ (ಸಂಘರ್ಷದ ಸೆಟ್ಟಿಂಗ್‌ಗಳಲ್ಲಿ, ಸಾವಿನ ಸಂಖ್ಯೆ ಎರಡು ಪಟ್ಟು ಹೆಚ್ಚು).

ಸುಮಾರು ಮೂರನೇ ಒಂದು ಭಾಗದಷ್ಟು ಮಹಿಳೆಯರು ನಿಕಟ ಪಾಲುದಾರ ಹಿಂಸೆ, ಪಾಲುದಾರರಲ್ಲದ ಲೈಂಗಿಕ ಹಿಂಸೆ ಅಥವಾ ಎರಡನ್ನೂ ಅನುಭವಿಸಿದ್ದಾರೆ. ಕೇವಲ ಆರು ದೇಶಗಳು ಸಂಸತ್ತಿನಲ್ಲಿ ಶೇಕಡಾ 50 ಅಥವಾ ಅದಕ್ಕಿಂತ ಹೆಚ್ಚಿನ ಮಹಿಳೆಯರನ್ನು ಹೊಂದಿವೆ. ಓದಲು ಸಾಧ್ಯವಾಗದ ಜಾಗತಿಕವಾಗಿ 800 ಮಿಲಿಯನ್ ಜನರಲ್ಲಿ ಮೂರನೇ ಎರಡರಷ್ಟು ಮಹಿಳೆಯರಾಗಿದ್ದಾರೆ.

**ಜಾಗತಿಕ ಸಮಸ್ಯೆಗಳು: ಜನಸಂಖ್ಯೆ**

ಪ್ರಪಂಚದ ಜನಸಂಖ್ಯೆಯ ನಾಟಕೀಯ ಬೆಳವಣಿಗೆಯು ಸಂತಾನೋತ್ಪತ್ತಿ ವಯಸ್ಸಿಗೆ ಬದುಕುಳಿಯುವ ಜನರ ಸಂಖ್ಯೆ ಹೆಚ್ಚಾಗುವುದರ ಮೂಲಕ ಹೆಚ್ಚಾಗಿ ನಡೆಸಲ್ಪಟ್ಟಿದೆ. ಫಲವತ್ತತೆಯ ದರಗಳಲ್ಲಿ ಪ್ರಮುಖ ಬದಲಾವಣೆಗಳು, ಹೆಚ್ಚುತ್ತಿರುವ ನಗರೀಕರಣ ಮತ್ತು ವಲಸೆಯ ವೇಗವನ್ನು ಹೆಚ್ಚಿಸಿದೆ. ಈ ಪ್ರವೃತ್ತಿಗಳು ಮುಂದಿನ ಪೀಳಿಗೆಗೆ ದೂರಗಾಮಿ ಪರಿಣಾಮಗಳನ್ನು ಬೀರುತ್ತವೆ. ವಿಶ್ವಸಂಸ್ಥೆಯ ವ್ಯವಸ್ಥೆಯು ಈ ಸಂಕೀರ್ಣ ಮತ್ತು ಪರಸ್ಪರ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ದೀರ್ಘಕಾಲ ಗಮನಾರ್ಹವಾಗಿ, ಯುಎನ್ ಜನಸಂಖ್ಯಾ ನಿಧಿ (ಯುಎನ್‌ಎಫ್‌ಪಿಎ) ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯ ಯುಎನ್ ಜನಸಂಖ್ಯಾ ವಿಭಾಗದ ಮೂಲಕ ತೊಡಗಿಸಿಕೊಂಡಿದೆ

ಹೊಸ ಡೇಟಾವು ಜನಸಂಖ್ಯೆಯ ಆತಂಕಗಳು ವ್ಯಾಪಕವಾಗಿ ಹರಡಿವೆ ಮತ್ತು ಸರ್ಕಾರಗಳು ಫಲವತ್ತತೆಯ ದರಗಳನ್ನು ಹೆಚ್ಚಿಸುವ, ಕಡಿಮೆ ಮಾಡುವ ಅಥವಾ ನಿರ್ವಹಿಸುವ ಗುರಿಯನ್ನು ಹೊಂದಿರುವ ನೀತಿಗಳನ್ನು ಹೆಚ್ಚಾಗಿ ಅಳವಡಿಸಿಕೊಳ್ಳುತ್ತಿವೆ. ಆದರೆ ಫಲವತ್ತತೆಯ ದರಗಳ ಮೇಲೆ ಪ್ರಭಾವ ಬೀರುವ ಪ್ರಯತ್ನಗಳು ಆಗಾಗ್ಗೆ ನಿಷ್ಪರಿಣಾಮಕಾರಿಯಾಗಿರುತ್ತವೆ. UNFPA ಹೆಗ್ಗುರುತು ವರದಿ ಪ್ರಕಾರ 8 ಬಿಲಿಯನ್ ಜೀವಗಳು, ಅನಂತ ಸಾಧ್ಯತೆಗಳು ಹಕ್ಕುಗಳು ಮತ್ತು ಆಯ್ಕೆಗಳ ಪ್ರಕರಣದ ಪ್ರಕಾರ ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳಬಹುದು. 1978 ರಿಂದ ವಾರ್ಷಿಕವಾಗಿ ಪ್ರಕಟವಾದ, ದಿ ಸ್ಟೇಟ್ ಆಫ್ ವರ್ಲ್ಡ್ ಪಾಪ್ಯುಲೇಶನ್ ವರದಿಯು ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಹಕ್ಕುಗಳ ಕ್ಷೇತ್ರದಲ್ಲಿ ಉದಯೋನ್ಮುಖ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ, ಅವುಗಳನ್ನು ಮುಖ್ಯವಾಹಿನಿಗೆ ತರುವ ಅಂತರರಾಷ್ಟ್ರೀಯ ಅಭಿವೃದ್ಧಿಗೆ ಅವರು ಪ್ರಸ್ತುತಪಡಿಸುವ ಸವಾಲುಗಳು ಮತ್ತು ಅವಕಾಶಗಳನ್ನು ಅನ್ವೇಷಿಸುತ್ತದೆ.

**ನಾವು ಅಂತರಾಷ್ಟ್ರೀಯ ದಿನಗಳನ್ನು ಏಕೆ ಗುರುತಿಸುತ್ತೇವೆ?**

ಅಂತರರಾಷ್ಟ್ರೀಯ ದಿನಗಳು ಮತ್ತು ವಾರಗಳು ಸಾರ್ವಜನಿಕರಿಗೆ ಕಾಳಜಿಯ ವಿಷಯಗಳ ಬಗ್ಗೆ ಶಿಕ್ಷಣ ನೀಡಲು, ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ರಾಜಕೀಯ ಇಚ್ಛಾಶಕ್ತಿ ಮತ್ತು ಸಂಪನ್ಮೂಲಗಳನ್ನು ಸಜ್ಜುಗೊಳಿಸಲು, ಮಾನವೀಯತೆಯ ಸಾಧನೆಗಳನ್ನು ಆಚರಿಸಲು ಮತ್ತು ಬಲಪಡಿಸಲು ಸಂದರ್ಭಗಳಾಗಿವೆ. ಅಂತರಾಷ್ಟ್ರೀಯ ದಿನಗಳ ಅಸ್ತಿತ್ವವು ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂಚಿನದ್ದಾಗಿದೆ, ಆದರೆ UN ಅವುಗಳನ್ನು ಪ್ರಬಲವಾದ ವಕಾಲತ್ತು ಸಾಧನವಾಗಿ ಸ್ವೀಕರಿಸಿದೆ. ನಾವು ಇತರ UN ಆಚರಣೆಗಳನ್ನು ಸಹ ಗುರುತಿಸುತ್ತೇವೆ.

**ಜನಸಂಖ್ಯಾ ಸಮಸ್ಯೆ**

ವಿಶ್ವದ ಬಹುತೇಕ ಕಡೆಗಳಲ್ಲಿ ಕಳೆದ ಶತಮಾನದಲ್ಲಿ ಕಂಡ ಜನಸಂಖ್ಯೆಯ ಹೆಚ್ಚಳದಲ್ಲಿನ ತೀವ್ರಗತಿ ಇಂದು

**ಸಮೃದ್ಧಿ ಸುಜ್ಞಾನ**

ಇನ್ನೊಬ್ಬರ ಬದುಕನ್ನು ಅಣಕಿಸುವುದನ್ನು ಬಿಟ್ಟಾಗಲೇ
ನಮ್ಮ ಬದುಕು ನಮಗೆ ಸುಂದರವಾಗಿ ಕಾಣಲು ಸಾಧ್ಯ.

ಜಗತ್ತಿನಲ್ಲಿ ಲಭ್ಯವಿರುವ ಸೀಮಿತ ಸಂಪನ್ಮೂಲಗಳ ಮೇಲೆ ತೀವ್ರ ಪರಿಣಾಮಗಳನ್ನು ಬೀರುತ್ತಿವೆ. ಐಷಾರಾಮಿ ಜೀವನದತ್ತ ಚಿಂತಿತ ಇಂದಿನ ವೈಜ್ಞಾನಿಕ ಯುಗದಲ್ಲಂತೂ ಇದರ ಪರಿಣಾಮ ಹೇಳತೀರದ್ದಾಗಿದೆ. ಚರಿತ್ರೆಯಲ್ಲಿ ಹಿಂದೆ ಜನನ ಸಂಖ್ಯೆಯ ತೀವ್ರತೆಯ ಜೊತೆ ಜೊತೆಗೆ ಮರಣ ಸಂಖ್ಯೆಯ ತೀವ್ರತೆಯೂ ಹೆಚ್ಚಿತ್ತು. ಮುಂದುವರಿದ ವಿಜ್ಞಾನ ಯುಗದಲ್ಲಿ ಮನುಷ್ಯನ ಆಯುಷ್ಯದ ಹೆಚ್ಚಳ ಇರುವ ಜನಾಂಗದ ಬದುಕನ್ನು ಹೆಚ್ಚಿಸುವುದರ ಜೊತೆಗೆ ಜನನ ಸಂಖ್ಯೆಯನ್ನೂ ಹೆಚ್ಚಿಸುತ್ತಾ ನಡೆದಿದೆ.

**ವಿವಿಧ ಸವಾಲುಗಳು**

ಮನುಷ್ಯನ ವೈಜ್ಞಾನಿಕ ತಿಳುವಳಿಕೆ ಹೆಚ್ಚಿದಂತೆಲ್ಲಾ ಈ ಕುರಿತು ಹಲವಾರು ವಿಚಿತ್ರ ಪರಿಸ್ಥಿತಿಗಳೂ ತಲೆದೋರತೊಡಗಿವೆ. ಒಂದೆಡೆ ವಿದ್ಯಾವಂತ ಜನಾಂಗಗಳಲ್ಲಿ ನಮಗೆ ಜವಾಬ್ದಾರಿಗಳು ತಾಪತ್ರಯಗಳು ಬೇಡ, ಅದಕ್ಕೇ ನಮಗೆ ಮಕ್ಕಳೂ ಬೇಡ ಎಂಬ ಮನೋಭಾವಗಳು, ಕೆಲವು ಸಮಾಜಗಳಲ್ಲಿ ಜನಸಂಖ್ಯಾ ಬೆಳವಣಿಗೆಯನ್ನೇ ಇಲ್ಲವಾಗಿಸುವುತ್ತ ನಡೆದಿವೆ. ಮತ್ತೊಂದೆಡೆ ಕೆಲವು ಸಮಾಜಗಳು ಭ್ರೂಣ ಹಂತದಲ್ಲಿನ ಲಿಂಗ ನಿರ್ಧಾರಿತ ಕ್ರಮದಿಂದ ಜನನ ನಿಯಂತ್ರಣದ ತೀವ್ರವಾದಿ ಕ್ರಮಕ್ಕೆ ಎಡೆ ನೀಡಿ ಮಾನವ ಜನಾಂಗದ ಮಾನವೀಯ ಸಂಸ್ಕಾರ ಮತ್ತು ಮಾನವ ಸಮುದಾಯದ ಏಳ್ಗೆಯಲ್ಲಿರಬೇಕಾದ ಸಮತೋಲನಕ್ಕೇ ಪೆಟ್ಟು ನೀಡುವ ಕ್ರಮಕ್ಕೆ ಕೈ ಹಾಕಿವೆ. ಇವೆಲ್ಲವುಗಳ ಜೊತೆ ಜೊತೆಯಲ್ಲಿ ಹೆಚ್ಚಿನ ಜನಗಳಲ್ಲಿ ಇನ್ನೂ ತುಂಬಿ ತುಳುಕುತ್ತಿರುವ ಬಡತನದಿಂದ ಕೂಡಿದ ಅಜ್ಞಾನ, ಮೌಢ್ಯಯುತ ಧಾರ್ಮಿಕ ಶ್ರದ್ಧೆ, ಅಪಕ್ವ ಚಾಪಲ್ಯತೆ ಮುಂತಾದ ಕಾರಣಗಳು ಜನಸಂಖ್ಯೆಯ ಏರಿಕೆ ನಿರಂತರವಾಗಿ ಏರುಮುಖದತ್ತಲೇ ಇರುವಂತೆ ಮಾಡಿದೆ.

**ಹೆಚ್ಚಿನ ಜನಸಂಖ್ಯೆಯ ಹತ್ತು ದೇಶಗಳು**

ವಿಶ್ವದ ಹೆಚ್ಚು ಜನಸಂಖ್ಯೆಯುಳ್ಳ ದೇಶಗಳು ಇಂತಿವೆ: ಚೀನಾ 135 ಕೋಟಿ, ಭಾರತ 120 ಕೋಟಿ, ಅಮೆರಿಕ 32 ಕೋಟಿ, ಇಂಡೋನೇಷ್ಯಾ 25 ಕೋಟಿ, ಬ್ರೆಜಿಲ್ 20 ಕೋಟಿ, ಪಾಕಿಸ್ಥಾನ 19 ಕೋಟಿ, ನೈಜೀರಿಯಾ 18 ಕೋಟಿ, ಬಾಂಗ್ಲಾದೇಶ 16 ಕೋಟಿ, ರಷ್ಯಾ 14 ಕೋಟಿ, ಜಪಾನ್ 13 ಕೋಟಿ.

ಜನಸಂಖ್ಯೆ ಎಷ್ಟಾದರೇನು ನಮ್ಮ ಭುವಿ ಪುಷ್ಪಕ ವಿಮಾನದಂತಿದೆ ಎಂದು ನಾವು ಸುಮ್ಮನಿರುವಂತಿಲ್ಲ. ಕಾರಣ ನಾವು ಪ್ರತಿಯೊಬ್ಬರಿಗೆ ಇರಲಿಕ್ಕೆ ಎಷ್ಟು ಜಾಗ ಬೇಕು ಎಂಬ ನಿಟ್ಟಿನಲ್ಲಿ ಮಾತ್ರ ಭೂಮಿಯ ಜಾಗವನ್ನು ಪರಿಗಣಿಸುವಂತಿಲ್ಲ. ಇಲ್ಲಿ ಪ್ರತಿಯೊಬ್ಬರಿಗೂ ಆಹಾರ ಪೂರೈಸಲಿಕ್ಕಾಗಿ ಹಲವಾರು ಎಕರೆಗಳ ಫಲವತ್ತಾದ ಭೂಮಿ ಬೇಕಾಗುತ್ತದೆ, ಶುದ್ಧ ಜಲ ಬೇಕಾಗುತ್ತದೆ, ಜೊತೆಗೆ ಪ್ರಾಕೃತಿಕ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಹಲವಾರು ವ್ಯವಸ್ಥೆಗಳನ್ನು ನಿರ್ಮಿಸಿಕೊಳ್ಳುವ ಅಗತ್ಯತೆಗಳಿರುತ್ತವೆ.

ಬಹಳಷ್ಟು ಜನಗಳ ಅಭಿಪ್ರಾಯದಲ್ಲಿ ವಿಶ್ವ ಜನಸಂಖ್ಯೆ ಬೆಳೆಯುತ್ತಿಲ್ಲ ಎಂಬ ತಪ್ಪು ಕಲ್ಪನೆಯಿದೆ. ಆದರೆ ವಿಶ್ವ ಜನಸಂಖ್ಯಾ ನಿಯಂತ್ರಣದ ಕುರಿತಾದ ಚಿಂತನಾ ಮಂಡಳಿಯ ಪ್ರಕಾರ ನಮ್ಮ ವಿಶ್ವದ ಜನಸಂಖ್ಯೆ ನಿರಂತರ ಏರುತ್ತಲೇ ಇದೆ. ಅದು ನೀಡುವ ಮಾಹಿತಿ ಇಂತಿದೆ ಪ್ರತಿ ನಿಮಿಷಕ್ಕೆ 160, ಒಂದು ಗಂಟೆಗೆ 9,600, ಒಂದು ದಿನಕ್ಕೆ 2,30,000, ವಾರವೊಂದಕ್ಕೆ 16 ಲಕ್ಷ, ವರ್ಷವೊಂದಕ್ಕೆ 8.4 ಕೋಟಿ ಜನಸಂಖ್ಯೆ ಇಂದೂ ಕೂಡ ಹೆಚ್ಚುತ್ತಲೇ ಇದೆ.

**ಸಾಮಾಜಿಕ ಜವಾಬ್ದಾರಿ**

ಈ ಜನಸಂಖ್ಯೆಯ ಏರಿಕೆ ಬಹುತೇಕವಾಗಿ ಬಡತನ, ಅಜ್ಞಾನ, ಮೌಢ್ಯಯುತ ಧಾರ್ಮಿಕ ಶ್ರದ್ಧೆ, ಅಪಕ್ವ ಚಾಪಲ್ಯತೆ ಮುಂತಾದವುಗಳು ರಾರಾಜಿಸುತ್ತಿರುವ ದೇಶಗಳಲ್ಲೇ ಹೆಚ್ಚಾಗಿರುವುದು ಕಂಡುಬರುತ್ತಿವೆ. ಇದೇ ಸಮಯದಲ್ಲಿ ಮುಂದುವರಿದ ದೇಶಗಳಲ್ಲಿ ನಡೆಯುತ್ತಿರುವ ಅಪಕ್ವ ಅಮಾನವೀಯ ಜನಸಂಖ್ಯಾ ನಿಯಂತ್ರಣ ಕ್ರಮಗಳು ಸರಿ ಎನ್ನುವಂತಿಲ್ಲ. ನಮ್ಮ ಮಕ್ಕಳನ್ನು ಜವಾಬ್ದಾರಿಯುತವಾಗಿ ಆಹಾರ, ಆರೋಗ್ಯ ಜ್ಞಾನಕೊಟ್ಟು ಸಾಕುತ್ತೇವೆ, ಸಮಾಜಕ್ಕೆ ಹೆಚ್ಚು ಮಕ್ಕಳನ್ನು ಕೊಟ್ಟು ಭಾರ ಹೆಚ್ಚಿಸುವುದಿಲ್ಲ, ಲಿಂಗ ಭೇದವಿಲ್ಲದೆ ಮಾನವೀಯ ನೆಲೆಗಟ್ಟಿನಲ್ಲಿ ಜನಸಂಖ್ಯೆಯ ನಿಯಂತ್ರಣಗಳನ್ನು ಅಳವಡಿಸುತ್ತೇವೆ, ಯಾವುದೇ ಧರ್ಮ, ಜಾತಿ ಭೇದಗಳಿಲ್ಲದೆ ಹೆಚ್ಚು ಮಕ್ಕಳಾಗದಂತಹ ವ್ಯವಸ್ಥಾತ್ಮಕ ಕಾರ್ಯಕ್ರಮಗಳನ್ನು ಒಪ್ಪಿಕೊಂಡು ಜನಸಂಖ್ಯೆ ಹೆಚ್ಚಳವಾಗದಂತೆ ನಿಗಾವಹಿಸುತ್ತೇವೆ ಎಂಬ ಜವಾಬ್ದಾರಿ ಈ ಪ್ರಪ್ರಂಚದಲ್ಲಿನ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೂ ಆಗಬೇಕಿದೆ. ॐ





# ನೆಲ್ಸನ್ ಮಂಡೇಲಾ

ಪ್ರತಿ ವರ್ಷ ಜುಲೈ 18ರಂದು ನೆಲ್ಸನ್ ಮಂಡೇಲಾ ದಿನವಾಗಿ ಆಚರಿಸಲಾಗುತ್ತಿದೆ. ದಕ್ಷಿಣ ಆಫ್ರಿಕಾದ ಗಾಂಧಿ ಎಂದೇ ನೆಲ್ಸನ್ ಮಂಡೇಲಾ ಪ್ರಸಿದ್ಧರಾಗಿದ್ದರು. ಶಾಂತಿ, ವರ್ಣಭೇದ ನೀತಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ವೈವಿಧ್ಯತೆ, ಸಾಮರಸ್ಯಕ್ಕೆ ಮಂಡೇಲಾ ಅವರು ನೀಡಿದ ಕೊಡುಗೆಯನ್ನು ನೆನಪಿಸುವುದು ಹಾಗೂ ಇಂಥ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಜನರನ್ನು ಪ್ರೇರೀಪಿಸುವುದು ಈ ದಿನದ ಆಶಯವಾಗಿದೆ.

ನೆಲ್ಸನ್ ಮಂಡೇಲಾ ಜುಲೈ 18, 1918 ರಲ್ಲಿ ದಕ್ಷಿಣ ಆಫ್ರಿಕಾದ ಟ್ರಾನ್ ಸ್ಕೈಂನಲ್ಲಿ ಜನಿಸಿದರು. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧ ಹೋರಾಡಿ ಕಪ್ಪು ಜನಾಂಗದವರನ್ನು ಮುಖ್ಯವಾಹಿನಿಗೆ ತಂದು ನಿಲ್ಲಿಸುವಲ್ಲಿ ಯಶಸ್ವಿಯಾದರು. ಈ ಹಿನ್ನೆಲೆಯಲ್ಲಿ ಅವರು ಜೈಲುವಾಸವನ್ನು ಅನುಭವಿಸಿದರು.

1952 ರಲ್ಲಿ ಜೊಹಾನ್ಸ್‌ಬರ್ಗ್‌ನಲ್ಲಿ ಸಹವರ್ತಿ ಎಎನ್‌ಸಿ ನಾಯಕ ಆಲಿವರ್ ಟ್ಯಾಂಬೊ ಅವರೊಂದಿಗೆ, ಮಂಡೇಲಾ ಅವರು ಮೊದಲ ಕಪ್ಪು ಕಾನೂನು ಅಭ್ಯಾಸವನ್ನು ಸ್ಥಾಪಿಸಿದರು. ಇದು 1948 ರ ನಂತರದ ವರ್ಣಭೇದ ನೀತಿಯಿಂದ ಉಂಟಾದ ಪ್ರಕರಣಗಳಲ್ಲಿ ಪರಿಣಿತಿ ಪಡೆದಿದೆ. ಮಂಡೇಲಾ ಅವರ ವರ್ಣಭೇದ ವಿರೋಧಿ ಕ್ರಿಯಾಶೀಲತೆಯು ಅವರನ್ನು ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿಸಿತು.

1952 ರಿಂದ ಪ್ರಾರಂಭಿಸಿ, ಅವರನ್ನು ಮಧ್ಯಂತರವಾಗಿ ನಿಷೇಧಿಸಲಾಯಿತು. ವರ್ಣಭೇದ ವಿರೋಧಿ ಕಾರ್ಯಕರ್ತರಿಗೆ ಕಿರುಕುಳ ನೀಡಲು ವಿನ್ಯಾಸಗೊಳಿಸಲಾದ ದೇಶದ್ರೋಹದ ಆರೋಪದ ಮೇಲೆ 1956 ರ ಡಿಸೆಂಬರ್‌ನಲ್ಲಿ ಅವರನ್ನು 100ಕ್ಕೂ ಹೆಚ್ಚು ಜನರೊಂದಿಗೆ ಬಂಧಿಸಲಾಯಿತು.

1994ರಲ್ಲಿ ಮಂಡೇಲಾ ನೇತೃತ್ವದ ಎಎನ್‌ಸಿ ದಕ್ಷಿಣ ಆಫ್ರಿಕಾದ ಮೊದಲ ಚುನಾವಣೆಗಳನ್ನು ಸಾರ್ವತ್ರಿಕ ಮತದಾನದ ಮೂಲಕ ಗೆದ್ದಿತು. ಮೇ 10 ರಂದು ಮಂಡೇಲಾ ಅವರು ದೇಶದ ಮೊದಲ ಬಹು ಜನಾಂಗೀಯ ಸರ್ಕಾರದ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದರು. ಮಂಡೇಲಾ 1997 ರ ಡಿಸೆಂಬರ್‌ನಲ್ಲಿ ಎಎನ್‌ಸಿಗೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಆ ಕಚೇರಿಯನ್ನು ತೊರೆದ ಮೇಲೆ ಮಂಡೇಲಾ ಸಕ್ರಿಯ ರಾಜಕೀಯದಿಂದ ನಿವೃತ್ತರಾದರು.

1999ರಲ್ಲಿ ಸ್ಥಾಪಿಸಲಾದ ನೆಲ್ಸನ್ ಮಂಡೇಲಾ ಫೌಂಡೇಶನ್‌ನ ಕೆಲಸದ ಮೂಲಕ ಅವರು ಶಾಂತಿ, ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯದ ಪ್ರತಿಪಾದಕರಾಗಿ ಬದಲಾದರು. ಕಪ್ಪು ಜನಾಂಗದ ಮೊದಲ ಅಧ್ಯಕ್ಷರಾಗಿ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ನೆಲ್ಸನ್ ಮಂಡೇಲಾ ಆ ಜನಾಂಗದವರ ಪಾಲಿನ ಪಿತಾಮಹರೆನಿಸಿದ್ದಾರೆ. ಕಪ್ಪುಜನರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅವರಿಗೆ 250ಕ್ಕೂ ಹೆಚ್ಚು ಪ್ರಶಸ್ತಿಗಳು ದೊರತಿವೆ. ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವರ ವರ್ಣಭೇದ ನೀತಿ ವಿರುದ್ಧ ಹೋರಾಟವನ್ನು ಗುರುತಿಸಿ 1990 ರಲ್ಲಿ ಭಾರತ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿಲಾಯಿತು.

2009ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನೆಲ್ಸನ್ ಮಂಡೇಲಾ ಅವರು ಹುಟ್ಟಿದ ದಿನವಾದ ಜುಲೈ 18 ಅನ್ನು ನೆಲ್ಸನ್ ಮಂಡೇಲಾ ಇಂಟರ್ ನ್ಯಾಷನಲ್ ಡೇಯನ್ನಾಗಿ ಆಚರಿಸಬೇಕೆಂದು ಘೋಷಿಸಲಾಯಿತು. ಮಂಡೇಲಾ ಅವರು ಮೊದಲ ಕಪ್ಪು ವರ್ಣೀಯ ಅಧ್ಯಕ್ಷ ಎಂಬ ಖ್ಯಾತಿಗೆ ಭಾಜನರಾದವರು. ದಕ್ಷಿಣ ಆಫ್ರಿಕಾದಲ್ಲಿ ಸಂಪೂರ್ಣ

ಪ್ರಜಾಪ್ರಭುತ್ವದ ಚುನಾವಣೆಯಲ್ಲಿ ಚುನಾಯಿತರಾದ ಮೊದಲ ಅಧ್ಯಕ್ಷ ಇವರು. ಆ ದಿನವು ದಕ್ಷಿಣ ಆಫ್ರಿಕಾದಲ್ಲಿ ಬಹುಜನಾಂಗೀಯ ಪ್ರಜಾಪ್ರಭುತ್ವವನ್ನು ಸೋಲಿಸಲು ಅವರ ಪರಿವರ್ತನೆಯ ಹಂತಗಳನ್ನು ತೋರುತ್ತದೆ. ಈ ಲೇಖನದಲ್ಲಿ ನೆಲ್ಸನ್ ಮಂಡೇಲಾ ದಿನದ ಇತಿಹಾಸ ಮತ್ತು ಪ್ರಾಮುಖ್ಯತೆಗಳ ಬಗ್ಗೆ ತಿಳಿಸಲಾಗಿದೆ.

**ಆಚರಣೆ**

ಈ ದಿನವನ್ನು 2010ರ ಜುಲೈ 18 ರಂದು ಮೊದಲ ಬಾರಿ ಆಚರಿಸಲಾಗಿತ್ತು. ಅಂದು ನೆಲ್ಸನ್ ಮಂಡೇಲಾ ಅವರ 92ನೇ ಜನ್ಮದಿನಾಚರಣೆಯೂ ಆಗಿತ್ತು. ವರ್ಣಭೇದ ನೀತಿ ವಿರೋಧಿ ನಾಯಕನಿಗೆ ಗೌರವ ಸಲ್ಲಿಸುವ ಸಲುವಾಗಿ ಈ ದಿನದ ಆಚರಣೆಯನ್ನು ಜಾರಿಗೆ ತರಲಾಯಿತು. ಮಂಡೇಲಾ ಅವರ ದಿನಾಚರಣೆಯನ್ನು ಗುರುತಿಸಲು ನಿಧಿ ಸಂಗ್ರಹ, ಕಾರ್ಯಕ್ರಮಗಳು, ಕಲಾ ಪ್ರದರ್ಶನಗಳು ಹಾಗೂ ಸಂಗೀತ ಕಚೇರಿಗಳನ್ನು ಆಯೋಜಿಸಲಾಗುತ್ತದೆ.

**ನೆಲ್ಸನ್ ಮಂಡೇಲಾ ದಿನದ ಮಹತ್ವ**

ನೆಲ್ಸನ್ ಮಂಡೇಲಾ ದಿನವು ಮಾನವಕುಲಕ್ಕೆ ಮಂಡೇಲಾರ ಕೊಡುಗೆಯನ್ನು ನೆನಪಿಸುವ ಕೆಲಸವನ್ನು ಮಾಡುತ್ತದೆ. ಈ ದಿನವು ಜಾಗತಿಕ ಬದಲಾವಣೆಯ ಕರೆಯನ್ನು ನೀಡುತ್ತದೆ. ಇದು ಪ್ರತಿಯೊಬ್ಬ ವ್ಯಕ್ತಿಯು ಬದಲಾವಣೆಯನ್ನು ತರಲು ಮತ್ತು ಸಮಾಜದ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿದ್ದಾನೆ ಎಂಬ ಕಲ್ಪನೆಯನ್ನು ಎತ್ತಿ ತೋರಿಸುತ್ತದೆ.

ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರ ಪರಂಪರೆಯನ್ನು ಗೌರವಿಸುವಲ್ಲಿ ಈ ದಿನವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ದಿನವನ್ನು '46664' ಎಂದೂ ಕರೆಯುತ್ತಾರೆ ಮತ್ತು ಇದನ್ನು ಮೂಲತಃ HIV/AIDS ಕುರಿತು ಜಾಗೃತಿ ಮೂಡಿಸಲು ಪ್ರಾರಂಭಿಸಲಾಯಿತು. 46664, 2003 ಮತ್ತು 2008 ರ ನಡುವೆ ದಕ್ಷಿಣ ಆಫ್ರಿಕಾದ ಮತ್ತು ವಿದೇಶಿ ಸಂಗೀತಗಾರರಿಂದ ನೆಲ್ಸನ್ ಮಂಡೇಲಾ ಅವರ ಗೌರವಾರ್ಥವಾಗಿ ಆಡಿದ ಏಡ್ಸ್ ಪ್ರಯೋಜನಕಾರಿ ಸಂಗೀತ ಕಛೇರಿಗಳ ಸರಣಿಯಾಗಿದೆ.

**ಇತಿಹಾಸ**

ನವೆಂಬರ್ 2009 ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು ಜುಲೈ 18 ಅನ್ನು ಅಂತರರಾಷ್ಟ್ರೀಯ ದಿನವೆಂದು ಘೋಷಿಸಿತ್ತು. ಸಮಾಜದಲ್ಲಿ ಶಾಂತಿ ಮತ್ತು ಸ್ವಾತಂತ್ರ್ಯ ಸಂಸ್ಕೃತಿಗೆ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷರ ಕೊಡುಗೆಯನ್ನು ಗುರುತಿಸಲು ಈ ದಿನವನ್ನು ಆಚರಿಸಲಾಗುತ್ತದೆ.

ಅವರು ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಮೊದಲ ಕಪ್ಪು ಅಧ್ಯಕ್ಷರು ಮಾತ್ರವಲ್ಲದೆ ಜಗತ್ತನ್ನು ಪರಿವರ್ತಿಸುವ ಬೃಹತ್ ಕನಸುಗಳನ್ನು ಹೊಂದಿರುವ ವ್ಯಕ್ತಿಯಾಗಿದ್ದರು. ಈ ದಿನ ಬಡತನ, ಲಿಂಗ ಅಸಮಾನತೆ, ವರ್ಣಭೇದ ನೀತಿ ಮತ್ತು ಮಾನವ ಹಕ್ಕುಗಳ ನಿರ್ಮೂಲನೆ ವಿರುದ್ಧದ ಅವರ ಹೋರಾಟವನ್ನು ಅಂಗೀಕರಿಸುತ್ತದೆ. ಮಂಡೇಲಾ ಅವರ ಮೌಲ್ಯಗಳನ್ನು ಮತ್ತು ಮಾನವೀಯತೆಯ ಸೇವೆಗೆ ಅವರ ಜೀವಮಾನದ ಸಮರ್ಪಣೆಯನ್ನು ಗಮನಿಸುತ್ತದೆ. ॐ





# ಭವಿಷ್ಯರೇಖೆಗೆ ಭವಿಷ್ಯ ಬರೆದ ಪಾಣಿನಿ

ಅಂಗೈಯಲ್ಲಿ ವಿದ್ಯೆರೇಖೆಯೇ ಇಲ್ಲದವ ಮಹಾಸಂಸ್ಕೃತ ಜ್ಞಾನಿಯಾದನೆಂದರೆ, ಅದು ಭವಿಷ್ಯ ಹೇಳುವ ಜ್ಯೋತಿಷ್ಯಶಾಸ್ತ್ರವನ್ನೇ ಬೆರಗುಮಾಡಿದ ಆ ಘಟನೆ ಇಂದಿಗೂ ಸೋಮಾರಿಗಳನ್ನು ಬಡಿದೆಚ್ಚರಿಸುವ, ಭವಿಷ್ಯದ ಮೇಲೆ ಭರವಸೆ ಹೊತ್ತು ಕೂರುವ ಅದೆಷ್ಟೋ ಜನರಿಗೆ ಪಾಣಿನಿಯ ಬಾಲ್ಯದ ಪ್ರಸಂಗವೊಂದು ಬದುಕಿನ ಸ್ಫೂರ್ತಿಯ ದಾರಿದೀಪವೇ ಸರಿ..!

ಗುರುಕುಲದಲ್ಲಿ ದಡ್ಡ ಶಿಖಾಮಣಿ ಬಾಲಕನೊಬ್ಬ ಅಧ್ಯಯನ ಮಾಡುತ್ತಿದ್ದ. ಒಮ್ಮೆ ಪಾಠ ಒಪ್ಪಿಸುವಲ್ಲಿ ತಪ್ಪು ಮಾಡಿದ್ದಕ್ಕೆ ಗುರುಗಳು, ಬೆತ್ತ ಪ್ರಹಾರಕ್ಕಾಗಿ ಕೈಚಾಚಲು ಹೇಳಿದರು. ಬಾಲಕ ಹಾಗೆಯೇ ಮಾಡಿದ. ಅವನ ಕೈ ನೋಡಿದ ತಕ್ಷಣ, ಗುರುಗಳು ತಮ್ಮ ಕೈಯನ್ನು ಹಿಂದಕ್ಕೆಳೆದುಕೊಂಡರು. ಯಾಕೆಂದರೆ, ಬಾಲಕನ ಕೈಯಲ್ಲಿ ವಿದ್ಯಾರೇಖೆಯೇ ಇರಲಿಲ್ಲ! ಆಗ ಗುರುಗಳು “ನಿನ್ನ ಕೈಯಲ್ಲಿ ವಿದ್ಯಾರೇಖೆಯೇ ಇಲ್ಲ. ನಿನ್ನನ್ನು ದಂಡಿಸಿಯೂ ಪ್ರಯೋಜನವಿಲ್ಲ. ಮನೆಗೆ ಹೋಗು” ಎಂದುಬಿಟ್ಟರು. ಬಾಲಕ ಅತ್ಯಂತ ದುಃಖತಪ್ತನಾಗಿ ಮನೆಗೆ ಬರುತ್ತಿರುವಾಗ, ಕೆಲವು ಹೆಂಗಳೆಯರು ಬಾವಿಕಟ್ಟೆಯಲ್ಲಿ ನೀರು ಸೇದುತ್ತಿರುವುದನ್ನು ನೋಡಿದ. ಹೆಂಗಸರು ನೀರು ಸೇದಿ, ಕೊಡ ಇಡುವ ಜಾಗದಲ್ಲಿ ಹೊಂಡ ಸೃಷ್ಟಿಯಾಗಿತ್ತು, ಅದನ್ನು ಕಂಡ ಬಾಲಕ “ಬಾವಿ ಕಟ್ಟೆ ಕಟ್ಟುವಾಗಲೇ ಹೀಗೆ ಕೊರೆದು ಕಟ್ಟಿದ್ದಾರೆಯೇ?’ ಎಂದು ಕೇಳಿದ, ಅವರು “ಇಲ್ಲ, ಕಟ್ಟುವಾಗ ಸರಿಯಾಗಿಯೇ ಕಟ್ಟಿದ್ದರು. ದಿನವೂ ಕೊಡವನ್ನು ಇಟ್ಟು ಇಟ್ಟು ಹೀಗಾಗಿದೆ” ಎಂದರು.

ಆಗ ಬಾಲಕನಿಗೆ ಒಂದು ಯೋಚನೆ ಬಂತು. ಕಡು ಕಠಿಣ ಕಲ್ಲೇ ಹೀಗೆ ಬದಲಾಗಿರಬೇಕಾದರೆ, ನಾನು ಪ್ರಯತ್ನಪಟ್ಟರೆ ವಿದ್ಯೆ ಒಲಿಯುವುದಿಲ್ಲವೇ ಅನಿಸಿತು. ಆದರೆ, ತನಗೆ ವಿದ್ಯಾರೇಖೆಯೇ ಇಲ್ಲವೆಂದು ಗುರುಗಳು ಹೇಳಿದ ಮಾತು ನೆನಪಾದಾಗ, ಹರಿತವಾದ ಕಲ್ಲಿನಿಂದ ವಿದ್ಯಾರೇಖೆ ಇರಬೇಕಾದಲ್ಲಿ ರೇಖೆಯನ್ನು ಕೊರೆದುಕೊಂಡು ಗುರುಕುಲಕ್ಕೆ ಮರಳಿ ಬಂದ. ಗುರುಗಳು ಸಿಟ್ಟಿನಿಂದ “ನಿನಗೆ ವಿದ್ಯಾರೇಖೆಯೇ ಇಲ್ಲ. ಇಲ್ಲಿಗೆ ಬರಬೇಡ ಎಂದಿದ್ದೆನಲ್ಲ" ಎಂದರು. ಆತ, “ಗುರುಗಳೇ, ವಿದ್ಯಾರೇಖೆಯನ್ನು ಮಾಡಿಕೊಂಡು ಬಂದಿದ್ದೇನೆ" ಎಂದನು. ಗುರುಗಳು ಅಚ್ಚರಿಯಿಂದ, “ಏನು, ವಿದ್ಯಾರೇಖೆಯನ್ನು ಮಾಡಿಕೊಂಡು ಬಂದೆಯಾ?" ಎಂದು ಬಾಲಕನ ಕೈ ನೋಡುತ್ತಾರೆ. ವಿದ್ಯಾರೇಖೆ ಇರುವಲ್ಲಿ ಕೈ ಸಿಗಿದಿರುವುದನ್ನು ಕಂಡು ಅವರ ಕಣ್ತುಂಬಿ ಬರುತ್ತದೆ. ಆಗ ಅವರು ಪ್ರೀತಿಯಿಂದ, “ಮಗು, ಸಹಜವಾಗಿ ಇರಬೇಕಾದ ವಿದ್ಯಾರೇಖೆ ಇಲ್ಲವಾದ್ದರಿಂದ ಶಿವನನ್ನು ಮೊರೆ ಹೋಗು" ಎಂದು ಹುಡುಗನನ್ನು ತಪಸ್ಸಿಗೆ ಹಚ್ಚುತ್ತಾರೆ. ಬಾಲಕನ ಕಠೋರ ತಪಸ್ಸಿಗೆ ಮೆಚ್ಚಿ ಶಿವ ಪ್ರತ್ಯಕ್ಷನಾಗುತ್ತಾನೆ. ಆದರೆ, ಒಂದಕ್ಷರವನ್ನೂ ಮಾತನಾಡದೆ ತನ್ನ ಡಮರುಗವನ್ನು 14 ಸಾರಿ ಬಾರಿಸುತ್ತಾನೆ. ಆಗ 14 ನಾದಗಳು ಹೊರಹೊಮ್ಮಿದವು. ಅದನ್ನು ಆಧರಿಸಿ, ಸಂಸ್ಕೃತ ವ್ಯಾಕರಣಶಾಸ್ತ್ರ ರಚನೆ ಮಾಡಿದ ಆ

ಬಾಲಕನೇ ಪಾಣಿನಿ ಮಹರ್ಷಿಯಾಗುತ್ತಾನೆ ಎಂಬ ಪಾಣಿನಿಯ ಪ್ರಸಂಗ ನಮ್ಮೆಲ್ಲರಿಗೂ ಆತ್ಮವಿಶ್ವಾಸವನ್ನು ಬಡಿದೆಚ್ಚರಿಸುತ್ತದೆ ಅಲ್ಲವಾ..!



येनाक्षरसमाम्नायमधिगम्य महेश्वरात् । कृत्स्नं व्याकरणं प्रोक्तं तस्मै पाणिनये नमः ।।
येन धौता गिरः पुंसां विमलैः शब्दवारिभिः । तमश्चाज्ञानजं भिन्नं तस्मै पाणिनये नमः ।।

ಪಾಣಿನಿ ಸುಪ್ರಸಿದ್ಧ ಸಂಸ್ಕೃತ ವ್ಯಾಕರಣ ಬರೆದಾತ. ತಾಯಿ ದಾಕ್ಷಾ ಅಥವಾ ದಾಕ್ಷೀ. ತಂದೆ ಶಲಂಕ, ಗಾಂಧಾರ ದೇಶದ ಶಲಾತುರ ಗ್ರಾಮದವ. ಪಾಣಿನಿಯನ್ನು ಅವನ ತಾಯಿಯ ಹೆಸರಿನ ಮೇಲೆ ದಾಕ್ಷಾ ಅಥವಾ ದಾಕ್ಷೀಪುತ್ರನೆಂದೂ ತಂದೆಯ ಹೆಸರಿನ ಮೇಲೆ ಶಲಂಕನೆಂದೂ ಗ್ರಾಮದ ಹೆಸರಿನ ಮೇಲೆ ಶಾಲಾತುರೀಯ ಎಂದೂ ಕರೆಯುತ್ತಿದ್ದರಂತೆ. ಶಾಲಾತುರೀಯ ಎಂಬ ರೂಪವನ್ನು ಪಾಣಿನಿಯೆ ತನ್ನ ಗ್ರಂಥದಲ್ಲಿ ವಿವರಿಸಿದ್ದಾನೆ. ಈತನಿಗೆ ಅಹಿಕ ಎಂಬ ಇನ್ನೊಂದು ಹೆಸರೂ ಇತ್ತು ಎಂದು ತಿಳಿದುಬರುತ್ತದೆ. ಪಾಟಲೀಪುತ್ರದಲ್ಲಿದ್ದ ವರ್ಷ ಎಂಬ ಆಚಾರ್ಯರಲ್ಲಿ ಪಾಣಿನಿ ಶಿಷ್ಯನಾಗಿದ್ದುದಾಗಿ ಕಥಾಸರಿತ್ಸಾಗರದಲ್ಲಿ ಹೇಳಲ್ಪಟ್ಟಿದೆ. ಪಾಣಿನಿ ಸಿಂಹದ ಬಾಯಿಗೆ ತುತ್ತಾಗಿ ಸತ್ತನೆಂದು ಕಥೆಯೊಂದರಿಂದ ತಿಳಿದು ಬರುತ್ತದೆ.

ಪಾಣಿನಿಯ ಕಾಲದಲ್ಲಿ ಸಂಸ್ಕೃತ ಆಡುಭಾಷೆಯಾಗಿತ್ತು. ಅಲ್ಲದೆ ಗ್ರಾಂಥಿಕ ಸಂಸ್ಕೃತ ಭಾಷೆಗೂ ವ್ಯಾವಹಾರಿಕ ಸಂಸ್ಕೃತ ಭಾಷೆಗೂ ಅಷ್ಟಾಗಿ ವ್ಯತ್ಯಾಸವಿರಲಿಲ್ಲ. ಈ ಭಾಷೆಗೆ ಲೌಕಿಕ ಭಾಷೆ ಎನ್ನುವುದು. ಇದು ವೇದಗಳ ವೈದಿಕ ಭಾಷೆಗಿಂತ ತುಂಬ ಭಿನ್ನವಾಗಿತ್ತು. ಈ ವೈದಿಕ ಮತ್ತು ಲೌಕಿಕ ಭಾಷೆಗಳೆರಡಕ್ಕೂ ಅನ್ವಯಿಸುವಂತೆ ಒಂದೇ ವ್ಯಾಕರಣವನ್ನು ಶಬ್ದಾನುಶಾಸನ ಎನ್ನುವ ಹೆಸರಿನಲ್ಲಿ ರಚಿಸಿದ ಕೀರ್ತಿ ಸಲ್ಲುವುದು ಪಾಣಿನಿಯೊಬ್ಬನಿಗೆ ಮಾತ್ರ. ಅಲ್ಲದೆ ಈವರೆಗೆ ಉಪಲಬ್ಧವಾಗಿರುವ ಶಬ್ದಾನುಶಾಸನಗಳಲ್ಲಿ ಸಮಗ್ರವಾಗಿರುವುದು ಪಾಣಿನಿಯ ಅಷ್ಟಾಧ್ಯಾಯಿಯೊಂದೇ. ಇದರಲ್ಲಿನ ಸಾಂಕೇತಿಕ ಪರಿಶುದ್ಧತೆ ಮತ್ತು ಸೂತ್ರನಿರ್ಮಾಣ ಚಾತುರ್ಯ ಬೇರೆಲ್ಲೂ ಕಾಣಸಿಗುವುದಿಲ್ಲ.

ಪಾಣಿನಿಯ ವ್ಯಾಕರಣ ಸೂತ್ರಾತ್ಮಕವಾಗಿದೆ. ಅದರಲ್ಲಿ ಒಟ್ಟು 3,981 ಸೂತ್ರಗಳಿವೆ. ಈ ಎಲ್ಲಾ ಸೂತ್ರಗಳೂ ಒಂದೊಂದರಲ್ಲಿಯೂ ನಾಲ್ಕು-ನಾಲ್ಕು ಪಾದಗಳುಳ್ಳ ಎಂಟು ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟಿವೆ. ಆದ್ದರಿಂದ ಈ ವ್ಯಾಕರಣ ಗ್ರಂಥಕ್ಕೆ ಅಷ್ಟಾಧ್ಯಾಯಿ ಎಂಬ ಹೆಸರೇ ಬಳಕೆಯಲ್ಲಿದೆ. ಅಷ್ಟಕ, ಪಾಣಿನೀಯ ವೃತ್ತಿ ಸೂತ್ರ, ಅಕಾಲಿಕ ವ್ಯಾಕರಣ, ಶಾಲಾತುರೀಯ ತಂತ್ರ ಎಂಬುದು ಈ ಅಷ್ಟಾಧ್ಯಾಯಿಯ ಇತರ ಹೆಸರುಗಳು.

ಸಂಸ್ಕೃತ ಸಾಹಿತ್ಯ ಇತಿಹಾಸದಲ್ಲಿ ಕ್ರಿಸ್ತ ಪೂರ್ವದಲ್ಲಿ ಯಾಜ್ಞವಲ್ಕ್ಯ, ಬೌಧಾಯನ, ಕಾತ್ಯಾಯನ, ಆಪಸ್ತಂಬ, ಪಿಂಗಲ, ಪಾಣಿನಿ ಹೀಗೆ ಸಾಹಿತ್ಯಕಾರರು, ಸ್ಮೃತಿಕಾರರು, ಭಾಷ್ಯಕಾರರು, ವಯ್ಯಾಕರಣಿಗಳ ದಂಡು ನಮಗೆ ಸಿಗುತ್ತದೆ. ಅವುಗಳಲ್ಲಿ ಪಾಣಿನಿಯೇ ಅತ್ಯಂತ ಗಂಭೀರವಾದ ಮಾರ್ಗವನ್ನು ಕರುಣಿಸಿದ ಅಂದರೆ ಅದು ಅತಿಶಯವಲ್ಲ. ಅಸ್ತವ್ಯಸ್ತವಾದ ಪದಬಳಕೆಯ ಕ್ರಮಕ್ಕೆ ಹದಿನಾಲ್ಕು ಸೂತ್ರಗಳನ್ನು ಹಾಕಿ ಒಂದು ವ್ಯವಸ್ಥಿತ ಪದ್ಧತಿಯನ್ನು ತೋರಿಸಿಕೊಟ್ಟದ್ದು ಪಾಣಿನಿಯ ದೊಡ್ಡ ಕೊಡುಗೆ. ಅದನ್ನು ಅಳವಡಿಸಿಕೊಂಡು ಸಂಸ್ಕೃತ ಭಾಷಾ ಲೋಕ ಅಂದಿನಿಂದ ಇಂದಿನವರೆಗೆ ತನ್ನದೇ ಆದ ದೊಡ್ಡ ಕೊಡುಗೆಯನ್ನು ನೀಡುತ್ತಾ ಬಂದಿದೆ. ॐ

**ಸಂಪ್ರೀತಿ ಸುಘೋಷ**



ಮನುಷ್ಯನಲ್ಲಿರುವ ರಾಗ
ದ್ವೇಷಾದಿ ಮಾಲಿನ್ಯವನ್ನು
ತೊಡೆದು ಹಾಕುವಂಥ
ಸದ್ಗುರು ದೊರೆತಾಗ
ಮನುಷ್ಯ ಸನ್ಮಾರ್ಗದಲ್ಲಿ
ಮುನ್ನಡೆದು ಮುಕ್ತಿ
ಪಡೆಯುವುದು ಸುಲಭ ಸಾಧ್ಯ.

**ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ**

# ಹುಲಿ  ದಿನ



ಪ್ರತಿ ವರ್ಷ ಜುಲೈ 29 ರಂದು 'ಹುಲಿ ದಿನ'ವನ್ನು ಆಚರಣೆ ಮಾಡಲಾಗುತ್ತದೆ. ಹುಲಿ ನಮ್ಮ ದೇಶದ ರಾಷ್ಟ್ರೀಯ ಪ್ರಾಣಿ. ಹುಲಿ ಗಂಭೀರವಾದ ಮತ್ತು ಭವ್ಯವಾದ ಪ್ರಾಣಿ. ಇತ್ತೀಚಿನ ದಿನಗಳಲ್ಲಿ ಅಳುವಿನಂಚಿನತ್ತ ಹುಲಿಯ ಸಂತತಿಯು ಸಾಗುತ್ತಿದೆ. ಕ್ಷೀಣಿಸುತ್ತಿರುವ ಹುಲಿಗಳ ಸಂಖ್ಯೆಯ ಕುರಿತಾಗಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಜುಲೈ 29 ರಂದು ಅಂತರಾಷ್ಟ್ರೀಯ ಹುಲಿ ದಿನವನ್ನು ಆಚರಿಸಲಾಗುತ್ತದೆ.

ಅಕ್ರಮವಾಗಿ ನಡೆಸುತ್ತಿರುವ ವನ್ಯಜೀವಿಗಳ ವ್ಯಾಪಾರ, ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ಹಾಗೂ ಕಾಡಿನ ನಾಶದಿಂದಾಗಿ ಹುಲಿಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಜಗತ್ತಿನ ಕೇವಲ 13 ರಾಷ್ಟಗಳಲ್ಲಿ ಮಾತ್ರ ಹುಲಿಗಳು ಕಂಡುಬರುತ್ತವೆ. ಈ ಹಿನ್ನಲೆಯಲ್ಲಿ ಹುಲಿಗಳ ಸಂರಕ್ಷಣೆ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷ ಅಂತರಾಷ್ಟ್ರೀಯ ಹುಲಿ ದಿನವನ್ನು ಆಚರಿಸಲಾಗುತ್ತದೆ.

**ಅಂತರರಾಷ್ಟ್ರೀಯ ಹುಲಿ ದಿನ ಆಚರಣೆ ಹಿನ್ನಲೆ**

ಹುಲಿ ಸಂರಕ್ಷಣೆ ಮತ್ತು ಸಾರ್ವಜನಿಕರಲ್ಲಿ ಹುಲಿಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ 2010ರ ಜುಲೈ 29ರಂದು ಮೊದಲ ಬಾರಿಗೆ ಅಂತರಾಷ್ಟ್ರೀಯ ಹುಲಿ ದಿನವನ್ನು ರಷ್ಯಾದ ಸೆಂಟ್ ಪೀಟರ್ ಬರ್ಗ್‌ನಲ್ಲಿ ಆಚರಿಸಲಾಯಿತು. ಈ ದಿನದಂದು ಹುಲಿ ಸಂರಕ್ಷಣೆ ಕುರಿತು ಚರ್ಚೆ, ಉಪನ್ಯಾಸ, ಜಾಥಾ, ವಿಚಾರ ಸಂಕಿರಣ ಹಾಗೂ ಛಾಯಚಿತ್ರ ಪ್ರದರ್ಶನ ಮೂಲಕ ಹುಲಿ ಭೇಟೆ, ಹುಲಿಗಳ ರಕ್ಷಣೆಯ ಕುರಿತಾದ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಇಂದಿನ ದಿನಗಳಲ್ಲಿ ಹುಲಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ಮತ್ತು ಹುಲಿ ಸಂರಕ್ಷಣೆಯನ್ನು ಉತ್ತೇಜಿಸುವುದು ಈ ಆಚರಣೆಯ ಪ್ರಮುಖ ಉದ್ದೇಶವಾಗಿದೆ.

ನಾಲ್ಕು ವರ್ಷಕ್ಕೊಮ್ಮೆ ಹುಲಿ ಗಣತಿ ಮಾಡಲಾಗುತ್ತದೆ. 2018ರ ಹುಲಿ ಗಣತಿ ಪ್ರಕಾರ ದೇಶದಲ್ಲಿ 2967 ಹುಲಿಗಳು ಇವೆ ಎಂಬ ಮಾಹಿತಿ ದೊರೆತಿದೆ. ಈ ಮೂಲಕ ಜಗತ್ತಿನಲ್ಲಿ ಹುಲಿಗಳ ಸಂತತಿಗೆ ಅತ್ಯಂತ ಸುರಕ್ಷಿತ ಸ್ಥಳ ಭಾರತವಾಗಿದೆ. 2018 ರ ಹುಲಿ ಗಣತಿಗೆ 1400 ಕ್ಯಾಮೆರಾ ಟ್ರ್ಯಾಪ್‌ಗಳನ್ನು ಬಳಸಲಾಗಿತ್ತು. ಪ್ರಪಂಚದ 13 ದೇಶಗಳ

**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ – 562 120

ದೂರವಾಣಿ : 8971608213. ಇ–ಮೇಲ್ : **sampreethisamruddhi@gmail.com**

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

ಕಾಡಿನಲ್ಲಿ ಮಾತ್ರ ಹುಲಿಗಳನ್ನು ನಾವು ಕಾಣಬಹುದಾಗಿದೆ. ವಿಶ್ವದಲ್ಲೇ ಅತಿಹೆಚ್ಚು ಹುಲಿಗಳು ಇರುವುದು ಅದು ಏಷ್ಯಾಖಂಡದಲ್ಲೇ ಮಾತ್ರ. 2006 ರಿಂದ ಹುಲಿಗಳ ಗಣತಿಯನ್ನು ಮಾಡಲಾಗುತ್ತದೆ. ಈ ಪ್ರಕ್ರಿಯೆ ನಾಲ್ಕು ವರ್ಷಕ್ಕೊಮ್ಮೆ ವೈಜ್ಞಾನಿಕ ರೀತಿಯಲ್ಲಿ ನಡೆಯುತ್ತದೆ. 2006, 2010, 2014 ಹಾಗೂ 2018 ರಲ್ಲಿ ಗಣತಿ ಆಗಿದೆ. ನಾಲ್ಕು ವರ್ಷಗಳಿಗೆ ಹೋಲಿಸಿದರೆ ಹುಲಿಗಳ ಸಂಖ್ಯೆಯಲ್ಲಿ ಶೇ. 33ರಷ್ಟು ಹೆಚ್ಚಳವಾಗಿದೆ.

2018ರ ಗಣತಿ ಪ್ರಕಾರ ಮಧ್ಯಪ್ರದೇಶದಲ್ಲಿ 526 ಹುಲಿಗಳಿದ್ದು, ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ 524 ಹುಲಿಗಳಿದ್ದು, ಎರಡನೇ ಸ್ಥಾನದಲ್ಲಿದೆ. ಉತ್ತರಾಖಂಡದಲ್ಲಿ 442 ಹುಲಿಗಳಿದ್ದು ಮೂರನೇ ಸ್ಥಾನದಲ್ಲಿದೆ.

**ಗಣತಿಯನ್ನ ಹೇಗೆ ಮಾಡಲಾಗುತ್ತದೆ?**

ಹುಲಿ ಗಣತಿಯನ್ನು ನಾಲ್ಕು ವಿಧಾನದಲ್ಲಿ ನಡೆಸಲಾಗುತ್ತದೆ. ಮೊದಲ ಎರಡು ಹಂತದಲ್ಲಿ ಹುಲಿ ಇರುವಿಕೆಯ ಚಿಹ್ನೆ, ಸ್ಕ್ಯಾಟ್ ಮತ್ತು ಪಗ್ ಮಾರ್ಕ್ ಮೂಲಕ ಗುರುತಿಸಲಾಗುತ್ತದೆ. ಮೂರನೇ ಹಂತದಲ್ಲಿ ಜಿಐಎಸ್ ಅಪ್ಲಿಕೇಶನ್‌ನೊಂದಿಗೆ ಸಿದ್ಧಪಡಿಸಿದ ಕ್ಯಾಮೆರಾ ಟ್ರ್ಯಾಪ್‌ಗಳನ್ನು ಬಳಸಿ ಎಣಿಸಲಾಗುತ್ತದೆ. ಕೊನೆ ಹಂತದಲ್ಲಿ ಕ್ಯಾಮೆರಾ ಹಾಕದ ಪ್ರದೇಶದಲ್ಲಿ ಸರ್ವೆ ಕಾರ್ಯ ನೆಡೆಸಿ ದತ್ತಾಂಶ ಕಲೆ ಹಾಕಲಾಗುತ್ತದೆ.

ದೇಶದಲ್ಲಿ ಹುಲಿಗಳ ಸಂರಕ್ಷಣೆಗಾಗಿ 1973 ರಲ್ಲಿ ಪ್ರಾಜೆಕ್ಟ್ ಟೈಗರ್ ಅಸ್ತಿತ್ವಕ್ಕೆ ಬಂತು. ನಂತರ ಇದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವಾಗಿ ಬದಲಾಗಿ ಹುಲಿಗಳ ಉಳಿವಿಗಾಗಿ ಕೆಲಸ ಮಾಡುತ್ತಿದೆ. ಸ್ಪೆಷಲ್ ಟೈಗರ್ ಪ್ರೊಟೆಕ್ಷನ್ ಫೋರ್ಸ್ ದೇಶದಲ್ಲೇ ಮೊದಲ ಬಾರಿಗೆ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಜಾರಿಗೆ ತರಲಾಗಿದೆ. ಬಂಡೀಪುರ, ನಾಗರಹೊಳೆ, ಬಿಆರ್‌ಟಿ, ಭದ್ರಾ ಹಾಗೂ ಕಾಳಿ ಎಂಬ ಅರಣ್ಯಗಳಲ್ಲಿ ಕರ್ನಾಟಕದಲ್ಲಿ ಈ 5 ಪ್ರದೇಶಗಳನ್ನು ಕರ್ನಾಟಕದ ಹುಲಿ ಸಂರಕ್ಷಿತ ಪ್ರದೇಶಗಳಾಗಿ ಮಾರ್ಪಾಡಿಸಲಾಗಿದೆ.

ನಾಡಿನಲ್ಲಿ ಬದುಕುತ್ತಿರುವ ಮನುಷ್ಯ ಕಾಡಿನ ನಾಶವನ್ನು ಮುಂದುವರಿಸಿದ್ದಾನೆ. ಹುಲಿಗಳ ಆವಾಸಸ್ಥಾನವನ್ನು ವಶಕ್ಕೆ ಪಡೆಯುತ್ತಿರುವ ಜನರಿಂದಾಗಿ ಕಾಡು ಪ್ರಾಣಿಗಳು ನಾಡಿನ ಕಡೆಗೆ ಲಗ್ಗೆ ಇಡುತ್ತಿವೆ. ಅದುವೇ ಪ್ರಾಣಿಗಳ ಪ್ರಾಣಕ್ಕೆ ಕುತ್ತು ತರುವಂತಾಗಿದೆ. ಇಂಥ ಹುಲಿಗಳ ಸಂರಕ್ಷಣೆಗೆ ಜಾಗತಿಕ ಮಟ್ಟದಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ.

**ಅಂತಾರಾಷ್ಟ್ರೀಯ ಹುಲಿ ದಿನದ ಆಚರಣೆಗೆ ಕಾರಣ**

ಭಾರತವು 1973ರಲ್ಲಿ ಹುಲಿಗಳನ್ನು ಉಳಿಸುವ ವಿಶಿಷ್ಟ ಯೋಜನೆಯೊಂದಿಗೆ ಪ್ರಾಜೆಕ್ಟ್ ಟೈಗರ್ ಅನ್ನು ಪ್ರಾರಂಭಿಸಲಾಯಿತು. ಅದರ ರಚನೆಯ ವರ್ಷದಲ್ಲಿ 9 ಹುಲಿಗಳ ಜಾತಿಗೆ ಮೀಸಲಾಗಿದ್ದು, ತದನಂತರದಲ್ಲಿ ಟೈಗರ್ ಪ್ರಾಜೆಕ್ಟ್ ವ್ಯಾಪ್ತಿಯನ್ನು ಗಮನಾರ್ಹವಾಗಿ ಹೆಚ್ಚಿಸಲಾಯಿದೆ. ಈ ವರ್ಷದ ವೇಳೆಗೆ ಕಾಡು ಹುಲಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲು 13 ವ್ಯಾಪ್ತಿಯ ದೇಶದ ಸರ್ಕಾರಗಳು ಮಹತ್ವಾಕಾಂಕ್ಷೆಯ ಸಂರಕ್ಷಣಾ ಗುರಿಯನ್ನು ಹೊಂದಿವೆ.


**ಹುಲಿಗಳ ವೈವಿಧ್ಯತೆ**

ಸಾಮಾನ್ಯವಾಗಿ ಹುಲಿಗಳಲ್ಲಿ ಹಲವು ವೈವಿಧ್ಯತೆಗಳು ಇರುತ್ತದೆ. ಒಂದು ಹುಲಿಯು 13 ಅಡಿ ಎತ್ತರ ಹಾಗೂ 300 ಕೆಜಿವರೆಗೂ ತೂಕವನ್ನು ಹೊಂದಿರುತ್ತದೆ. ಆದರೆ ಸಿಂಹದ ರೀತಿ ಸಾಮೂಹಿಕವಾಗಿ ಬದುಕುವ ಪ್ರಾಣಿ ಇದಲ್ಲ. ಏಕಾಂಗಿಯಾಗಿ ಇರಲು ಬಯಸುವ ಬುದ್ಧಿವಂತ ಪ್ರಾಣಿಗಳ ಸಾಲಿನಲ್ಲಿ ಹುಲಿ ಕಾಣಿಸಿಕೊಳ್ಳುತ್ತದೆ. ಇನ್ನು ಅದರಲ್ಲಿ ಬಿಳಿ ಹುಲಿಗಳು, ಬಿಳಿ ಹುಲಿಗಳಲ್ಲಿ ಕಪ್ಪು ಪಟ್ಟೆಗಳು, ಕಂದು ಹುಲಿಗಳಲ್ಲಿ ಕಪ್ಪು ಪಟ್ಟೆಗಳು ಮತ್ತು ಚಿನ್ನದ ಹುಲಿಗಳ ಮೈ ಮೇಲೆ ಕಪ್ಪುಪಟ್ಟೆಗಳನ್ನು ಹೊಂದಿರುವ ಹುಲಿಗಳು ಇರುತ್ತವೆ.

**ಪ್ರಕೃತಿ-ವಿಕೃತಿ-ಸಂಸ್ಕೃತಿ**

ಮೋಹ ಪ್ರಕೃತಿ,
ವ್ಯಾಮೋಹ ವಿಕೃತಿ,
ನಿರ್ಮೋಹ ಸಂಸ್ಕೃತಿ.

ವಿವಿಧ ಬಣ್ಣಗಳ ಹುಲಿಗಳು ರಾಜಗಾಂಭಿರ್ಯದಿಂದ ನಡೆದುಕೊಂಡು ಹೋಗುವುದನ್ನು ನೋಡುವುದೇ ಅದ್ಭುತ ದೃಶ್ಯವಾಗಿ ಗೋಚರಿಸುತ್ತದೆ. ಇಲ್ಲಿಯವರೆಗೆ, ಬಾಲಿ ಟೈಗರ್, ಕ್ಯಾಸ್ಪಿಯನ್ ಟೈಗರ್, ಜಾವಾನ್ ಟೈಗರ್ ಮತ್ತು ಟೈಗರ್ ಹೈಬ್ರಿಡ್ಗಳು ಅಳಿವಿನಂಚಿನಲ್ಲಿರುವ ಪ್ರಭೇದಗಳಾಗಿವೆ. ಹುಲಿ ಸಂರಕ್ಷಣೆಯ ವಿಷಯದಲ್ಲಿ ಗಮನಹರಿಸುವುದು ಮುಖ್ಯವಾಗಿದೆ. ಏಕೆಂದರೆ ಇದು ನಮ್ಮ ಪರಿಸರ ವ್ಯವಸ್ಥೆಯ ಸಮತೋಲನವನ್ನು ರಕ್ಷಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.



**ಅಳಿವಿನಂಚಿನಲ್ಲಿರುವ ಪ್ರಾಣಿ ಹುಲಿ**

ಅಂತಾರಾಷ್ಟ್ರೀಯ ಮಟ್ಟದಲ್ಲಿ 1 ಲಕ್ಷಕ್ಕಿಂತ ಹೆಚ್ಚಾಗಿದ್ದ ಹುಲಿಗಳ ಸಂಖ್ಯೆಯು ಒಂದು ಶತಮಾನದಲ್ಲಿ ಶೇ.93ರಷ್ಟು ಕಡಿಮೆಯಾಗಿದೆ. ಹೀಗಾಗಿ ಹುಲಿಯನ್ನು ಅಳಿವಿನ ಅಂಚಿನಲ್ಲಿರುವ ಪ್ರಾಣಿ ಎಂದು ವರ್ಗೀಕರಿಸಲಾಗಿದೆ. ಹುಲಿಗಳ ಆವಾಸಸ್ಥಾನವಾದ ಕಾಡುಗಳನ್ನು ನಾಶಪಡಿಸುವುದು ಹಾಗೂ ಬೇಟೆ ಆಡುವುದರಿಂದ ಅವುಗಳು ಅಪಾಯದ ಅಂಚಿನಲ್ಲಿವೆ. ವಿಶ್ವ ವನ್ಯಜೀವಿ ನಿಧಿಯ ಪ್ರಕಾರ, ಪ್ರಪಂಚದಾದ್ಯಂತ ಕೇವಲ 3,900 ಕಾಡು ಹುಲಿಗಳಿವೆ ಎಂದು ಅಂಕಿ-ಅಂಶಗಳಿಂದ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಹುಲಿಗಳನ್ನು ಸಂರಕ್ಷಿಸುವ ಉದ್ದೇಶವನ್ನು ಇಟ್ಟುಕೊಂಡು ಅಂತಾರಾಷ್ಟ್ರೀಯ ಹುಲಿ ದಿನವನ್ನು ಆಚರಿಸಲಾಗುತ್ತಿದೆ. ॐ



# ಕಾರ್ಗಿಲ್ ವಿಜಯ್ ದಿವಸ್

ಪ್ರತಿ ಜುಲೈ 26 ರಂದು ಕಾರ್ಗಿಲ್ ವಿಜಯ್ ದಿವಸ್ ಅಥವಾ ಕಾರ್ಗಿಲ್ ವಿಜಯ ದಿನವನ್ನು ಆಚರಣೆ ಮಾಡಲಾಗುತ್ತದೆ. ಭಾರತೀಯರಿಗೆ ಇದು ಎಂದೂ ಮರೆಯದ ದಿನವಾಗಿದೆ. ಭಾರತೀಯರು ಎಂದು ಮರೆಯದ ಅವಿಸ್ಮರಣೀಯ ದಿನಗಳಲ್ಲಿ ಜುಲೈ 26 ಕೂಡಾ ಹೌದು. ಕಾರ್ಗಿಲ್ ಯುದ್ಧ ಭಾರತೀಯ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಜಮ್ಮು ಕಾಶ್ಮೀರದ ಕಾರ್ಗಿಲ್‌ನಲ್ಲಿ ನಡೆದ ಈ ಯುದ್ಧದಲ್ಲಿ ಪಾಕಿಸ್ತಾನವನ್ನು ನಮ್ಮ ಭಾರತದ ವೀರ ಯೋಧರು ಸದೆ ಬಡೆದು ಅವರು ಆಕ್ರಮಿಸಿಕೊಂಡಿದ್ದ ಜಾಗವನ್ನು ವಶಕ್ಕೆ ಪಡೆದ ದಿನವಾಗಿದೆ.

1999ನೇ ಇಸವಿಯ ಜುಲೈ 26ರಂದು ಭಾರತೀಯ ಸೈನಿಕರು ಅಪರೇಶನ್ ವಿಜಯ್ ಮೂಲಕ ಕಾರ್ಗಿಲ್-ಡ್ರಾಸ್ ವಲಯದಲ್ಲಿ ಪ್ರದರ್ಶಿಸಿದ ಶೌರ್ಯದ ನೆನಪಿಗಾಗಿ ಈ ದಿನವನ್ನು ಕಾರ್ಗಿಲ್ ವಿಜಯ ದಿವಸ್ ಎಂದು ಆಚರಿಸಲಾಗುತ್ತದೆ. ಕಾರ್ಗಿಲ್ ಯುದ್ಧದಲ್ಲಿ ಭಾರತ ವಿಜಯ ಪತಾಕೆಯನ್ನು ಹಾರಿಸಿ 25 ವರ್ಷ ತುಂಬುತ್ತದೆ. ಯುದ್ಧದಲ್ಲಿ ಹುತಾತ್ಮರಾದ ಸೈನಿಕರನ್ನು ಸ್ಮರಿಸಲು ದೇಶವು ಪ್ರತಿ ವರ್ಷ ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಗುತ್ತದೆ.

1999 ಮೇ ತಿಂಗಳಿನಲ್ಲಿ ಆರಂಭವಾದ ಕಾರ್ಗಿಲ್ ಯುದ್ಧ ಜುಲೈ ಅಂತ್ಯದ ತನಕ ಅಂದರೆ ಸುಮಾರು ಎರಡು ತಿಂಗಳ ಕಾಲ ನಡೆಯಿತು. ಈ ಯುದ್ಧದಲ್ಲಿ ಲೇಹ್ ಹೆದ್ದಾರಿಯವರೆಗೆ ನುಗ್ಗಿ ಬಂದಿದ್ದ ಪಾಕ್ ಸೇನೆಯನ್ನು ಭಾರತೀಯ

ಸೇನೆ ಕೆಚ್ಚೆದೆಯಿಂದ ಯಶಸ್ವಿಯಾಗಿ ಹಿಮ್ಮೆಟ್ಟಿಸಿತ್ತು. ಈ ಯುದ್ಧದಲ್ಲಿ ಭಾರತೀಯ ಸೇನೆಯ ಅಧಿಕಾರಿಗಳು ಸೇರಿದಂತೆ ಸುಮಾರು 527 ಭಾರತೀಯ ಯೋಧರು ಹುತಾತ್ಮರಾದರು.

ಅಂದಹಾಗೆ ಕಾಶ್ಮೀರದಲ್ಲಿರುವ ಕಾರ್ಗಿಲ್ ಹಿಮಾಲಯದ ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶ. ಕಾರ್ಗಿಲ್ ಕಾಶ್ಮೀರದ ರಾಜಧಾನಿ ಶ್ರೀನಗರದಿಂದ 205 ಕಿ.ಮೀ. ದೂರದಲ್ಲಿದೆ. ಲೇಹ್ ಮತ್ತು ಶ್ರೀನಗರವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 1 ಕಾರ್ಗಿಲ್ ಮೂಲಕ ಹಾದು ಹೋಗುತ್ತದೆ. ಈ ಪ್ರದೇಶದಲ್ಲಿ ಇರುವ ಏಕೈಕ ಹೆದ್ದಾರಿ ಇದಾಗಿದೆ. ಅಲ್ಲದೆ ವಿಶ್ವದ ಅತ್ಯಂತ ಎತ್ತರದಲ್ಲಿರುವ ಯುದ್ಧ ಭೂಮಿ ಸಿಯಾಚಿನ್‌ಗೂ ಸಂಪರ್ಕ ಕಲ್ಪಿಸುತ್ತದೆ ಈ ಹೆದ್ದಾರಿ.

**ಯುದ್ಧ ಆರಂಭವಾಗಿದ್ದು ಏಕೆ?**

ಈ ಯುದ್ಧ ನಡೆಯಲು ಮುಖ್ಯ ಕಾರಣ ಪಾಕಿಸ್ತಾನದ ಮೋಸದಾಟ. ಕಾರ್ಗಿಲ್ ಪ್ರದೇಶದಲ್ಲಿ ಭಾರತ ಮತ್ತು ಪಾಕಿಸ್ತಾನದ ಲೈನ್ ಆಫ್ ಕಂಟ್ರೋಲ್ (ಎಲ್‌ಒಸಿ) ಇದೆ. ಈ ಪ್ರದೇಶದಲ್ಲಿ ಚಳಿಗಾಲದಲ್ಲಿ ಮೈನಸ್ ಡಿಗ್ರಿ ಸೆಲ್ಸಿಯಸ್ ಇಳಿಯುತ್ತದೆ. ಇದರಿಂದ ಇಲ್ಲಿ ಗಡಿ ಕಾಯುವುದು ಭಾರತಕ್ಕೆ ಸವಾಲಿನ ಕೆಲಸ. ಚಳಿಗಾಲದಲ್ಲಿ ಭಾರತೀಯ ಸೈನಿಕರು ಮತ್ತು ಪಾಕ್ ಸೈನಿಕರು ಇಲ್ಲಿಂದ ಸ್ಥಳಾಂತರಗೊಳ್ಳುತ್ತಾರೆ.

ಚಳಿಗಾಲ ಮುಗಿದ ಬಳಿಕ ಇಲ್ಲಿಗೆ ಮತ್ತೆ ಗಡಿ ಕಾಯುವುದಕ್ಕೆ ಹೋಗುವುದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಾಗಿತ್ತು. 1999 ರಲ್ಲಿ ಈ ಸಂದರ್ಭವನ್ನೇ ಬಳಸಿಕೊಂಡ ಪಾಕಿಸ್ತಾನ, ಕಾಶ್ಮೀರದ ಹೋರಾಟಗಾರರ ಹೆಸರಿನಲ್ಲಿ ಪಾಕ್ ಸೈನಿಕರು, ಭಾರತದ ಪ್ರಮುಖ ಭಾಗಗಳನ್ನು ತನ್ನ ವಶಕ್ಕೆ ಪಡೆದುಕೊಂಡಿತು.

**ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಾಚರಣೆ**

ಆರಂಭದಲ್ಲಿ ಪಾಕಿಸ್ತಾನೀಯರು ಭಾರತದ ಒಳಗೆ ಸುಮಾರು ದೂರ ನುಸುಳಿದ್ದರು. ಆದರು ಅದು ಭಾರತೀಯ ಸೇನೆಯ ಅರಿವಿಗೆ ಬಂದಿರಲಿಲ್ಲ. ಆದರೆ ಪಾಕಿಸ್ತಾನಿಯರನ್ನು ಕಂಡ ಕಾಶ್ಮೀರದ ಕೆಲವು ಕುರಿಗಾಹಿ ಜನರು, ಭಾರತೀಯ ಸೇನೆಗೆ ವಿಷಯ ಮುಟ್ಟಿಸಿದ್ದರು. ತಕ್ಷಣವೇ ಕಾರ್ಯ ಪ್ರವೃತ್ತರಾದ ಸೇನಾಧಿಕಾರಿಗಳು, ಐದು ಯೋಧರನ್ನು ಗಸ್ತು ತಿರುಗಲೆಂದು ಕಳುಹಿಸಿಕೊಟ್ಟರು.

ಆದರೆ ಆಕ್ರಮಣ ಮನಸ್ಥಿತಿಯಲ್ಲಿದ್ದ ಪಾಕ್‌ನ ಸೇನೆ, ಭಾರತದ ಆ ಐದು ಯೋದರನ್ನು ಚಿತ್ರಹಿಂಸೆ ನೀಡಿ ಕೊಂದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಭಾರತ, ತಕ್ಷಣವೇ ಪಾಕಿಸ್ತಾನಕ್ಕೆ ಪ್ರತ್ಯುತ್ತರ ನೀಡಲು ನಿರ್ಧರಿಸಿತು. ಇದಕ್ಕಾಗಿ ಸೇನೆಯನ್ನು ಸಿದ್ಧಗೊಳಿಸಿತು. ಭಾರತ ಸರ್ಕಾರ ಇಪ್ಪತ್ತು ಸಾವಿರ ಭಾರತೀಯ ಸೈನಿಕರನ್ನ ಸಜ್ಜುಗೊಳಿಸಿ ಮೇ 3 ರಿಂದ ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಾಚರಣೆ ಆರಂಭ ಮಾಡಿತು.

**ಆಪರೇಷನ್ ಸಫೇದ್ ಸಾಗರ್**

ಅತ್ತ ಪಾಕಿಸ್ತಾನವು ಕೂಡಾ ಭಾರತದ ಮೇಲೆ ದಾಳಿ ಮಾಡಲು ಸಕಲ ಸಿದ್ಧತೆ ಮಾಡಿಕೊಂಡಿತ್ತು. ಅದರಂತೆ ಪಾಕ್ ಸುಮಾರು 5,000 ಕ್ಕೂ ಹೆಚ್ಚು ಸೈನಿಕರನ್ನ ಕಳುಹಿಸಿಕೊಟ್ಟಿತ್ತು. ಇದಕ್ಕೆ ತಕ್ಕ ಉತ್ತರ ನೀಡಲು ಭಾರತೀಯ ಸೇನೆ ಶಸ್ತ್ರಸಜ್ಜಿತವಾಗಿ ಮುನ್ನುಗ್ಗಿತ್ತು. ಎತ್ತರದ ಪ್ರದೇಶದಲ್ಲಿ ಸಾಕಷ್ಟು ಸಮಸ್ಯೆ ಇದ್ದರೂ ಶೆಲ್ ದಾಳಿಯ ಮೂಲಕ ಭಾರತೀಯ ಸೇನೆ ಪಾಕಿಸ್ತಾನಿಯ ಬಂಕರ್‌ಗಳತ್ತ ದೃಷ್ಟಿ ಇರಿಸಿತ್ತು. ಭಾರತಕ್ಕೆ ಬೋಫೋರ್ಸ್ ಫಿರಂಗಿ, ವಾಯುಪಡೆಯ ಮಿಗ್–27, ಮಿಗ್–29 ಯುದ್ಧ ವಿಮಾನಗಳು ಸಾಕಷ್ಟು ಬಲ ತುಂಬಿದ್ದವು.

'ಆಪರೇಷನ್ ಸಫೇದ್ ಸಾಗರ್' ಅನ್ನು ಪ್ರಾರಂಭಿಸಿದ ಭಾರತೀಯ ಸೇನೆ, ಪಾಕಿಸ್ತಾನದ ಸೈನಿಕರ ಮೇಲೆ ದಾಳಿ ಮಾಡಲು ಇಂಡಿಯನ್ ಮಿಗ್ –21, ಮಿಗ್ –27 ಮತ್ತು ಮಿರಾಜ್ 2000 ನಂತಹ ಯುದ್ಧ ವಿಮಾನಗಳನ್ನು ಬಳಸಿತು. ಪಾಕ್ ಶತ್ರುಗಳನ್ನು ನಿರ್ಮೂಲನೆ ಮಾಡಲು ಐಎಎಫ್ ಯೋಧರು ಈ ವಿಮಾನಗಳಿಂದ ರಾಕೆಟ್ ಮತ್ತು ಕ್ಷಿಪಣಿಗಳನ್ನು ಹಾರಿಸಿದರು. ಓಂ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**

|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.



**OUR VISION:**

To Impart Quality Education
Transformation of Child through Excellent Education
Child Centered Education

## Hunt Your Dreams

**Institution Code : 541**



### Salient Features

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



### For Admissions, Contact :

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

Registered with Registrar of News Papers for India No.KARKAN/2018/76081, **Sampreethi Samruddhi,** July - 2024.
License to post without prepayment. License No.**KA/BG/CNA/119/2022-2024,**
Date of publication: **28.06.2024.** Posted at **Magadi Sub Post Office-562120** on **29th** of every month



# ಸಮೃದ್ಧಿ ಭೈರವ ಭವನ



**T.M. ರೋಡ್, ಚುಂಚನಹಳ್ಳಿ, ಶ್ರೀ ಆದಿಚುಂಚನಗಿರಿ ಕ್ಷೇತ್ರ**












**ಶ್ರೀ ಭೈರವೇಶ್ವರ ಸ್ವಾಮಿ ಭುಕ್ತಿ ಸೇವೆ, ಮದುವೆ, ನಾಮಕರಣ, ಆರತಕ್ಷತೆ,**
**ಭೀಗರ ಔತಣ, ಮುಂತಾದ ಶುಭ-ಸಮಾರಂಭಗಳಿಗೆ ಸಂಪರ್ಕಿಸಿ**

**7795808178, 8722127146**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120